ಸ್ಥಾಪಿತ No. M. 1393.

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೩ | ಮಂಗಳೂರು, ೧೯೪೧ನೇ ಇಸವಿ ಸಪ್ಟಂಬರ ತಾರೀಕು ೯ನೇ ಮಂಗಳವಾರ | ಸಂಚಿಕೆ ೪೭

VOL. XXIII | MANGALORE, TUESDAY, SEPTEMBER 9, 1941 | NO. 47

ಜಪಾನಿನ ಕೈಗಾರಿಕೆಗಳ ಪರಿಸ್ಥಿತಿ

ಅದು ಯುದ್ಧಕ್ಕೆ ಇಳಿಯುವಷ್ಟು ಉತ್ತೇಜಕವಾಗಿದೆಯೇ?

• ಜಪಾನಿನ ಪತ್ರಿಕೆಗಳು "ನಮ್ಮನ್ನು ಇತರ ರಾಷ್ಟ್ರಗಳು ಸುತ್ತುವಂತೆ ಅವಕಾಶ ಕೊಡಬಾರದು; ನಾವೀಗಲೇ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು" ಎಂದು ರಣಭೇರಿಯ ಸದ್ದುಮಾಡುತ್ತಿರುವಾಗ, ಯುದ್ಧಕಾರ್ಯದಲ್ಲಿ ಪ್ರಾಮುಖ್ಯವೆನ್ನಿಸಿದ ಆ ದೇಶದ ಕೈಗಾರಿಕೆಗಳ ವಿದ್ಯಮಾನಗಳನ್ನು ವಿಮರ್ಶಿಸುವುದೂ ಅಪ್ರಸಕ್ತವಾಗಲಾರದು.

"ಮೆಂಚೆಸ್ಟರ್ ಗಾರ್ಡಿಯನ್"ನ ವಾರ್ತೆಯ ಮೇರೆಗೆ ಜಪಾನು, ಒಂದು ವರ್ಷಕ್ಕೆ ಬೇಕಾದ ಎಣ್ಣೆ ಮೊದಲಾದ ಕೆಲವೊಂದು ಪದಾರ್ಥಗಳನ್ನು ಶೇಖರಿಸಿಟ್ಟುಕೊಂಡಿದೆ ಎಂದು ತಿಳಿದುಬರುತ್ತಿದೆ. ಒಂದು ವೇಳೆ ಆ ವಾರ್ತೆ ನಿಜವೆಂದಾದರೂ ಕೂಡ, ಜಪಾನಿನ ಆರ್ಥಿಕ ಪರಿಸ್ಥಿತಿ ಇನ್ನೂ ದುರ್ಬಲವೆಂದೇ ತಿಳಿಯಬೇಕು. ಜಪಾನಿನ ಯಾವತ್ತು ಮದ್ದುಗುಂಡಿನ ತಯಾರಿಗೆ ಮೂಲವಾದ ಭಾರೀ ಕಾರ್ಖಾನೆಗಳೆಲ್ಲವೂ, ತಮ್ಮ ಉಕ್ಕಿನ ಸರಬರಾಯಿಗೆ,—ಸುಮಾರು ಎಂಟರಲ್ಲಿ ಐದು ಪಾಲಿನ ಮಟ್ಟಿಗೆ,—ಪರದೇಶದಿಂದ ಸಾಗಿ ಬರುವ ಕಬ್ಬಿಣದ ಅದುರು, ಬೀಡ[illegible]ಕಬ್ಬಿಣ ಮೊದಲಾದವುಗಳ-ಮೇ[illegible]ಹೊಂದಿಕೊಂಡಿರುತ್ತವೆ. ಅದ[illegible]ಕ್ಕಿನ ಅಂಶವು, ಮಲಯ ಮತ್ತ[illegible]ಗಳಿಂದ ಜಪಾನಿಗೆ ಬರುತ್ತಿದೆ. [illegible]ದ ಜೂರುಗಳು ಇತ್ತೀಚಿಗೆ [illegible]ಯು ನೈಟೆಡ್ ಸ್ಟೇಟ್ಸ್‌ನಿಂದ ಬರುತ್ತಿದ್ದವು. ಈಗ ಹಾಗೆ ಸಾಗುವುದು ನಿಂತಿದೆ. ತರೆಗಾವಾದ ಕಲ್ಲಿದ್ದಲು ಅಪರೂಪವಾಗಿ ಉಕ್ಕನ್ನು ಹದಮಾಡಲು ಅಗತ್ಯವಿರುವ ಸಹಾಯಕ ಲೋಹಗಳು, ಧಾರಾಳ ಪ್ರಮಾಣದಲ್ಲಿ ಬೇಕಾದಷ್ಟು ಈಗ ಜಪಾನಿಗೆ ಸಾಗಿ ಬರುವುದಿಲ್ಲ. ತಾಮ್ರ ಮಾತ್ರ ಕೆಲಮಟ್ಟಿಗೆ ಜಪಾನಿನ ಗಣಿಗಳಿಂದ ಒದಗುತ್ತಿವೆ; ಮತ್ತೊಂದು ಲೋಹ ಮಿತವಾದ ಮಿತಿಯಲ್ಲಿ ಇಂಡೋ ಚೀನದಲ್ಲಿ ಲಭ್ಯವಾಗುತ್ತಿದೆ. ಈಚಿಗೆ ಕೆಲವು ತಿಂಗಳಿಂದ ಸ್ಪೆಶಲ್ ಉಕ್ಕು, ಯಂತ್ರಸಾಧನ, ಆ ಸಾಧನಗಳ ಉಪಕರಣ ಮೊದಲಾದುವು ಎಲ್ಲಿಂದಲೂ ಜಪಾನಿಗೆ ಬಂದುದಿಲ್ಲ.

ಜಪಾನಿನ ವಿಜಯಗಳೆಂಬುವು ಅದಕ್ಕೆ ಹೆಚ್ಚಿನ ಪ್ರಯೋಜನವನ್ನು ಉಂಟುಮಾಡಿಲ್ಲ. ೧೯೪೦ರಲ್ಲಿ ಜಪಾನು ಮಂಚಕಾವೋದಿಂದ ತೆಗೆದುಕೊಂಡ ಪ್ರತಿಯೊಂದು ಯೆನ್ ಬಾಳುವ ಪದಾರ್ಥಕ್ಕೆ ಬದಲಾಗಿ, ಜಪಾನು ತಾನು ಮಂಚಕಾವೊವಿಗೆ ೩ ಯೆನ್ ಬೆಲೆ ಬಾಳುವ ನಿರ್ಮಿತ ಸಾಮುಗ್ರಿಗಳನ್ನೇ ಹಿಂದಿರುಗಿ ಕೊಡಬೇಕಾಯಿತು. ಜಪಾನು ವಶಮಾಡಿಕೊಂಡ ಚೀನದ ಪ್ರದೇಶಗಳಲ್ಲಿ ವ್ಯವಸ್ಥಿತವಾದ ವಿದ್ಯಮಾನಗಳನ್ನು ಜಪಾನು ಏರ್ಪಡಿಸಲು ಅಶಕ್ತವಾಗಿರುವುದೂ ಅಲ್ಲಿ ಕೈಗಾರಿಕೆ ನಿರ್ಮಾಣ ಕಾರ್ಯಗಳು ಸಾಗಲು ತಕ್ಕಷ್ಟು ಸೌಕರ್ಯಗಳು ಇಲ್ಲದಿರುವುದೂ ಗಣಿಗಳ ಹಾಗೂ ಬಟ್ಟೆಯ ಉತ್ಪತ್ತಿಯ ಕುರಿತಾದ ಜಪಾನಿನ ಯೋಜನೆಗಳಿಗೆ ಇಂಬನ್ನು ಕೊಡದೆ ಇವೆ. ಮತ್ತೆ ವಿಶ್ವದ ಮಟ್ಟಿಗೆ, ಈಚಿಗಿನ ವರೆಗೆ ಕಾಲಿಫೋರ್ನಿಯಾ ಮತ್ತು ಡಚ್ ಇಂಡೀಸಿನಿಂದ ಜಪಾನಿಗೆ ಧಾರಾಳವಾದ ಸರಬರಾಯಿಯಾಗುತ್ತಿದ್ದರೂ, ಈ ಕೆಲವು ತಿಂಗಳಲ್ಲಿ ಅತ್ತಣಿಂದ ವಿಮಾನಗಳಿಗೆ ಬೇಕಾದ ಉಚ್ಚ ತರಗತಿಯ ಎಣ್ಣೆ ಸಾಗಿದ ಹಾಗಿಲ್ಲ. ಹೀಗೆ, ದಕ್ಷಿಣ ಪೆಸಿಫಿಕ್‌ನಲ್ಲಿ ಯುದ್ಧ ಆರಂಭವಾದರೆ ವಿಮಾನಗಳ ಎಣ್ಣೆ ಸಾಲದೆ ಜಪಾನಿಗೆ ಕೈಕಟ್ಟಬಹುದು.

ಹತ್ತು ವರ್ಷಗಳ ಹಿಂದೆ, ಜಪಾನಿನಲ್ಲಿದ್ದ ಕೈಗಾರಿಕೆಗಳು ಸಾಮಾನ್ಯವಾದುವು—ಮುಖ್ಯವಾಗಿ ಬಟ್ಟೆಯವು. ಈಚಿಗೆ ತಯಾರಾದ ದೊಡ್ಡ ಕೈಗಾರಿಕೆ ಕಾರ್ಖಾನೆಗಳೆಲ್ಲ ಕೇವಲ ಬಾಲ್ಯಾವಸ್ಥೆಯಲ್ಲಿವೆ, ಅವುಗಳ ಯಂತ್ರಸಾಧನಗಳು ನಿಕೃಷ್ಟಾವಸ್ಥೆಯದೆಂದು ಜಪಾನೀ ವಿದ್ವಾಂಸರೇ ಒಪ್ಪುತ್ತಾರೆ. ಇಷ್ಟೇ ಅಲ್ಲದೆ, ಇದರಲ್ಲಿ ಇನ್ನೊಂದು ಪ್ರಾಮುಖ್ಯಾಂಶವೇನೆಂದರೆ,—ಈ ದೊಡ್ಡ ಕೈಗಾರಿ

(೧೫ನೇ ಪುಟಕ್ಕೆ ಮುಂದುವರಿಸಿಯದೆ)



ಶತ್ರುಗಳ ಟ್ಯಾಂಕುಗಳಿಗೆ ಬ್ರಿಟಿಷರ ಉತ್ತರ

ಇಂಗ್ಲೆಂಡಿನ ಫಿರಂಗಿ ಸೇನೆಯ ಈಚಿಗಿನ ಪರೀಕ್ಷಾ ಪ್ರಯೋಗ ಕಾಲದಲ್ಲಿ ಕಾಣಬರುತ್ತಿರುವ ವೇಗದಿಂದ ಹೊಡೆಯುತ್ತಿರುವ ಬ್ರಿಟಿಷ್ ಟ್ಯಾಂಕ್ ವಿನಾಶಕ ಕೋವಿಗಳಿವು. ಲೀಬಿಯನ್ ಯುದ್ಧರಂಗಗಳಲ್ಲಿ ಇಟೆಲಿಯ ವಿರುದ್ಧವಾಗಿ ಧ್ವಂಸಕಾರಕ ಪರಿಣಾಮವುಂಟಾಗುವಂತೆ ಉಪಯೋಗಿಸಲ್ಪಡುತ್ತಿರುವ ಕೋವಿಗಳೀ ಮಾದರಿಯವೇ.

Every Kanarite finds in the "**POPULAR**" a successful Life Assurance company of their own. To patronise it- to actively work for it- must continue to be the aim of every one who looks to the progress of Kanara enterprise.

Represent the "POPULAR". A permanent appointment on very remunerative basis awaits you.

THE POPULAR INSURANCE COMPANY LIMITED,

Head Office: Mangalore, S. India.

Pandit Bank,
MANGALORE.

ಪಂಡಿತ್ ಬೇಂಕ್,
ಕೋರ್ಟ್ ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿ ಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಈ ಕೆಳಗಿನ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ರೂ. 50ರ ತನಕ ಸೇ. 8%
ರೂ. 51ರಿಂದ ರೂ. 500ರ ತನಕ ಸೇ. 7%
ರೂ. 501ರಿಂದ ಮೇಲ್ಪಟ್ಟು ಸೇ. 6½%
ಬಡ್ಡಿ ದರವನ್ನು ಈ ತಿಂಗಳ ಮೊದಲ್ಗೊಂಡು ತಬ್ದಿಲು ಮಾಡಿದೆ.—

ಚಾಲ್ತಿ ಠೇವಣಾತಿ:
ಪ್ರತಿದಿನದ ಶಿಲ್ಕಿನ ಮೇಲೆ ಸೇ. 1 %
ಸೇವಿಂಗ್ಸ್ ಬ್ಯಾಂಕ್: ಸೇ. 3 %

ನಿರಖು ಠೇವಣಾತಿ:
6 ತಿಂಗಳುಗಳಿಗೆ ಸೇ. 3½ %
1 ವರ್ಷಕ್ಕೆ ಸೇ. 4 %

PANDIT SHIVA RAO, B.A., LL.B.
PROPRIETOR.
PANDIT SANJIVA RAO, B.A.
AGENT.

JAYA LAXMI BANK, LTD., MANGALORE.
ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.

(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಕಣ್ಣಾನೂರು.

ಅಧಿಕೃತ ಮೂಲಧನ . . .	**ರೂ. 5,00,000**
ಅರ್ಪಿಸಲಾದ ಮತ್ತು ಚೆಂದಾಹಾಕಿದ ಮೂಲಧನ	**ರೂ. 1,00,000**
ತೆತ್ತ ಮೂಲಧನ . . .	**ರೂ. 97,000**
ಕ್ಷೇಮ ಮತ್ತಿತರ ನಿಧಿಗಳು . .	**ರೂ. 1,14,830**

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ-ಸೇ.3%; 6 ತಿಂಗಳ ಠೇವಣಾತಿಗಳಿಗೆ-ಸೇ.3½%; 12 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಬಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao,
ಸೆಕ್ರಿಟರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನಿಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—2—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ಒಕ್ಕೆ ರೂ. 3—0—0. ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ ಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

(ರಿಜಿಸ್ಟರ್ಡ್)

ಬಾಲಾರ್ಕಮಧು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ; ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ: 0-12-0, ಟ. ಖ. 0-9-0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ:—

ಯಂ. ವಿ. ಪ್ರಸಾದಿಕೆ ಔಷಧಾಲಯ,
ಶಿವಮೊಗ್ಗಾ. (ಮೈಸೂರು ಸೀಮೆ)

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ
?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ–ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ ಸ್ಫೂರ್ತಿಯೂ ತೋರಿ ಬರುವುದು. **ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ** (ಟಪ್ಪಾಲು ಖರ್ಚು ಪ್ರತ್ಯೇಕ.)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ಇಟೆಲಿಯ ಮುಸ್ಸೋ ಈಗ ಹಿಟ್ಲರನ ಚೇಲನಾಗಿದ್ದಾನೆ!

ಚೇಲನಾಗಿ ಅವನ ಕೈಗೊಂಬೆಯಂತೆ ಕುಣಿಯುತ್ತಿದ್ದಾನೆ

ಇಟೆಲಿಯ ಸರ್ವಾಧಿಕಾರಿ ಮುಸ್ಸೋಲಿನಿಗೆ, ಮಿ। ಚೇಂಬರ್ಲೇನರನ್ನು [ಕೈ. ವ್ಯಾ.] ಕಂಡರೆ, ತುಂಬಾ ಸಂತೋಷವಾಗುತಿತ್ತು. ಇಬ್ಬರೂ ಪರಸ್ಪರ ಸ್ತುತಿಯ ಆಪ್ತ ಸ್ನೇಹಿತರಾಗಿದ್ದರು. ಆದರೆ ಚೇಂಬರ್ಲೇನರ ಕಾಲದಲ್ಲಿ ಆರಂಭಿಸಿದ ಯುದ್ಧದಲ್ಲೇ, ತನ್ನ ಗೆಳೆಯರ ಸಂಗಡಿಗರಿಗಿದಿರಾಗಿಯೇ, ಮುಸೋಲಿನಿಗೆ ಹೋರಾಡಬೇಕಾಗಿ ಬಂತು.

....ಇಟೆಲಿಯಲ್ಲಿ ಫ್ಯಾಸಿಸಂ ತನ್ನ ನಗ್ನತೆಯನ್ನು ಕಾಣಿಸಲು ಆರಂಭಿಸಿದ್ದ ಕಾಲ. ಹಿಟ್ಲರ್ ಜರ್ಮನಿಯಲ್ಲಿ, "ರಾಷ್ಟ್ರೀಯ ಸಮತಾವಾದ"ದ ಹೊದಿಕೆಯನ್ನು ಹೊದ್ದುಕೊಂಡು, ಅಧಿಕಾರಕ್ಕೆ ಬಂದ. ತನ್ನ ಪಂಥವನ್ನು ಪ್ರತಿಪಾದಿಸುವುದಕ್ಕೆ ಹೊಸಬನೊಬ್ಬನು ಹೊರೆತನೆಂದು, ಮುಸ್ಸೋಲಿನಿಗೆ ಹಿರಿಹಿರಿ ಹಿಗ್ಗಾಯಿತು.

೧೯೩೫ರಲ್ಲಿ, ಮುಸ್ಸೋಲಿನಿಯನ್ನು ಹಿಟ್ಲರ್ ರೋಮಿನಲ್ಲಿ ಸಂದರ್ಶಿಸಿದಾಗ, ಮುಸ್ಸೋಲಿನಿ ಅವನನ್ನು ತನ್ನ ಶಿಷ್ಯನಂತೆ ನಡೆಸಿಕೊಂಡುದಲ್ಲದೆ, ತನ್ನ ಸಂಗಡಿಗರ ಸಂಮಾರ್ಜನ(purge)ವನ್ನು, ಹೇಗೆ ಕೃತಕೃತ್ಯವಾಗಿ ಕೊನೆಗಾಣಿಸಿ ಸರ್ವಾಧಿಕಾರಿಯಾಗಬೇಕೆಂಬುದನ್ನೂ ಹಿಟ್ಲರಿಗೆ ಹೇಳಿಕೊಟ್ಟ.

* * * *

ಆದರೆ ಹಿಟ್ಲರನ ಶೀಘ್ರ ಉತ್ಕರ್ಷೆಯನ್ನು ಕಂಡು, ಮುಸ್ಸೋಲಿಗೆ ತಡೆಯಲಾರದ ಅಸೂಯೆ ಹುಟ್ಟಿತು. ತಾನೂ ಹಿಟ್ಲರನಿಂದ ಹಿಂದಾಗಬಾರದೆಂದು, ಮುಸೋಲಿನಿ, ತನ್ನ ಜೈತ್ರಯಾತ್ರೆಗೆ—ರೋಮ್ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸುವುದಕ್ಕೆ ತೊಡಗಿದ. ಹೀಗೆ ಅಬಿಸೀನಿಯ ಅಲ್ಬೇನಿಯಗಳು ಮುಸೋಲಿನಿಯ ಅಧೀನಕ್ಕೆ ಬಂದುವು.

ಸ್ಪೇಯಿನಿನ ಅಂತಃಕಲಹ ಆರಂಭವಾಯಿತು. ಹಿಟ್ಲರ್ ಜನರಲ್ ಫ್ರಾಂಕೋವಿಗೆ ಸಹಾಯಗೈಯುವುದಕ್ಕೆ ಮೊದಲು ಮಾಡಿದ. ಮುಸಲೋನಿ ಸ್ವಪ್ರತಿಷ್ಠೆಯನ್ನು ಕಳೆದುಕೊಳ್ಳಬಾರದೆಂದು, ಆ ಕೀರ್ತಿ–ವಿಜಯಲಾಭಗಳಲ್ಲಿ ತನಗೆ ಸಮಾನ ಪಾಲಾದರೂ ದೊರಕಬೇಕೆಂದೆಣಿಸಿ, ತಾನೂ ಫ್ರಾಂಕೋವನ್ನು ಪ್ರೋತ್ಸಾಹಿಸಿದ.

* * * *

ಆಂತೂ ಎರಡನೆಯ ಘೋರ ಯುದ್ಧವು ಆರಂಭವಾಯಿತು. ಹಿಟ್ಲರ್ ಪೈರಿರಾಷ್ಟ್ರಗಳಲ್ಲಿ ಹಲವನ್ನು ಪುಡಿಗುಟ್ಟುವುದಕ್ಕೆ ಸಮರ್ಥನಾದ. ಫ್ರಾನ್ಸಿನ ಪತನದ ಕಾಲ ಸಮೀಪಿಸಿತು. ಫ್ರೆಂಚ್ ಸೇನೆಗಳು ಅದಾಗಲೇ ಹಿಮ್ಮೆಟ್ಟತೊಡಗಿದ್ದುವು.

ಮುಸೋಲಿನಿ ಇತ್ತ ಕುಳಿತು ಆಲೋಚಿಸುತ್ತಿದ್ದ.—ಇನ್ನು ಏಕಾಂಗಿಯಾದ ಬ್ರಿಟನ್ ನಿಶ್ಚಯವಾಗಿಯೂ ಸೆಲ್ಲಲಾರದೆಂದು ಅವನು ಭಾವಿಸಿದ. ಹಿಟ್ಲರನ ವಿಜಯವು ಅವನಿಗೆ ಅನಿವಾರ್ಯವಾಗಿ ಕಂಡಿತು. ಸ್ವಪ್ರತಿಷ್ಠೆಯನ್ನು ಇನ್ನೂ ಕಾಯ್ದುಕೊಳ್ಳುವ ಒಂದು ವಿಧಾನವೆಂದರೆ, ತಾನೂ ಯುದ್ಧರಂಗವನ್ನು ಪ್ರವೇಶಿಸುವುದು. ಆ ನಿಶ್ಚಯವನ್ನೂ ಅವನು ಕಾರ್ಯರೂಪಕ್ಕೆ ತಂದುಬಿಟ್ಟ.

ತನ್ನ ಜೀವಿತದಲ್ಲಿ ಮುಸೋಲಿನಿ ಮಾಡಿದ ಬಹು ದೊಡ್ಡ ತಪ್ಪೆಂದರೆ—ಅಂತಹ ವಿನಾಶಕಾರಿಯಾದ ನಿರ್ಣಯವನ್ನು ಕೈಗೊಂಡುದು.

ಬರೇ ಈಯೊಬ್ಬ ವ್ಯಕ್ತಿಯ ನಿಶ್ಚಯದಿಂದಾಗಿ, ಇಡೀ ರಾಷ್ಟ್ರವೇ ಸಂಕಷ್ಟಗಳಿಗೀಡಾಯಿತು. ಲಂಡನಿನಲ್ಲಿ, ಜರ್ಮನರು ತಮ್ಮ ಆಕಾಶ ದಾಳಿಗಳನ್ನು ಹೇಗೆ ಮಾಡಿದರೋ, ಹಾಗೆಯೇ ಇಂಗ್ಲಿಷರೂ ಇಟೆಲಿಯ ಬಂದರುಗಳ ಮೇಲೆ ದಾಳಿ ಮಾಡಿದರು. ಮೈತ್ರಿಯಿಂದಿದ್ದ ರಾಷ್ಟ್ರಗಳೆರಡರ ಜನಗಳು ವೈರಿಗಳಾದರು.

* * * *

ಅಂದಿನಿಂದ, ಬ್ರೆನ್ನರ್ ಕಣಿವೆಯ ಬಳಿ, ಸರ್ವಾಧಿಕಾರಿಗಳಿಬ್ಬರು, ಸಂಧಿಸುವುದಕ್ಕೂ, ತಮ್ಮ ಕಾರ್ಯಕ್ರಮಗಳನ್ನು ನಿಶ್ಚೈಸುವುದಕ್ಕೂ ತೊಡಗಿದರು.

ಈ ಟೊಳ್ಳು ಗುಟ್ಟು ಮುಸೋಲಿನಿಯ ಶೌರ್ಯ ಪ್ರದರ್ಶನಕ್ಕೆ ಆರಂಭವಾದುದೂ ಆಗಲೇ! ಗ್ರೀಸಿನಲ್ಲಿ ಇಟೆಲಿಯು ಆಡಿದ ನಾಟಕವನ್ನು ಮರೆಯುವಂತಿಲ್ಲ. ತನ್ನ ಸಂಗಾತಿಯೊಬ್ಬನು, ತನಗೆ ಉಪದ್ರವಕಾರಿಯಾಗಿ ಪರಿಣಮಿಸಿದುದನ್ನು ಹಿಟ್ಲರ್ ಅರಿತುಕೊಂಡ.

ಅಬಿಸೀನಿಯದಲ್ಲಿ, ಬ್ರಿಟಿಷರ ಅಭಿಯೋಗವು ಜಯವನ್ನು ಸಂಪಾದಿಸುತ್ತಾ ನಡೆಯಿತು. ಕೊನೆಗಂತೂ, ಅದು ಇಟೆಲಿಯ ಕೈ ಬಿಟ್ಟು ಹೋಗಿ "ಸ್ವತಂತ್ರ"ವಾಯಿತು. ಇಟೆಲಿಯ ಸಾಮ್ರಾಜ್ಯ, ಮುಸೋಲಿನಿಯ ಕನಸಾಗಿ ತೋರಿತು. ಇಟೆಲಿಯ ಇಮಾನ್ಯ ವೇಲ್ ಚಕ್ರವರ್ತಿಯರು, ಬರಿಯ ಅರಸರಾದರು.

ಮುಸೋಲಿನಿ, ಆಫ್ರಿಕದ ತನ್ನ ವಸಾಹತುಗಳನ್ನು ಕಳೆದುಕೊಂಡ. ಜಗತ್ತಿನ ಮುಂದಿಯಲ್ಲಿ ಮುಸೋಲಿನಿ ಮನ್ನಣೆಯನ್ನು ಕಳೆದುಕೊಂಡ. ಆವರ ತುಚ್ಛೀಕಾರವನ್ನು ಗಳಿಸಿಕೊಂಡ. ಹಿಟ್ಲರನ ಅಂತರಂಗದ ಗೆಳೆತನವನ್ನೂ ಕಳೆದುಕೊಂಡ!

ಹಲವು ತಿಂಗಳುಗಳಿಂದ, ಇಟೆಲಿಯು ನೆರವೇರಿಸಲು ಅಸಾಧ್ಯವಾದುದನ್ನು, ಜರ್ಮನಿಗೆ ಕೆಲವೇ ದಿನಗಳಲ್ಲಿ ಕೈಗೂಡಿಸಲು ಶಕ್ಯವಾಯಿತು.

ಇಟೆಲಿಯನ್ನು ಜರ್ಮನರು ಆವರಿಸಿಕೊಂಡರು. ಹಿಂದಿನ ಆಚಾರ್ಯರು ಇಂದಿನ ಶಿಷ್ಯರಾದರು.

* * * *

ಇತ್ತೀಚೆಗೆ ಯಾರೋ ಇಟೆಲಿ ಬ್ರಿಟನ್ನಿನೊಡನೆ ಪ್ರತ್ಯೇಕ ಸಂಧಿ ಮಾಡಿಕೊಳ್ಳಲೂ ಬಹುದು ಎಂದು ಗಾಳಿಗೋಪುರಗಳನ್ನು ಕಟ್ಟಿದ್ದರು. ಆದರೆ ಅದು ಇಟೆಲಿಯ ಜನತೆಯ ಇಲ್ಲವೆ, ಮುಸೋಲಿನಿಯ ಕೈಯಲ್ಲಿಲ್ಲ. ಎಲ್ಲವೂ ಹಿಟ್ಲರನ ಮೇಲೆ ಹೊಂದಿಕೊಂಡಿದೆ. ಮುಸೋಲಿನಿ ಅವನ ಕೈಯಲ್ಲಿರುವ ಒಂದು ಗೊಂಬೆ ಮಾತ್ರ!

ಅಷ್ಟೂ ಸಾಲದೆ, "ಫ್ಯಾಸಿಸಮ್ಮಿನೊಡನೆ ಸಂಧಿ ಇಲ್ಲ!" ಎಂಬ ಬ್ರಿಟಿಷ್ ಸರಕಾರದ ಸ್ಪಷ್ಟೀಕರಣವನ್ನು, ನಾವು ಮರೆಯುವಂತಿಲ್ಲ!

ಪ್ರೆಸಿಡೆಂಟ್ ರುಜ್‌ವೆಲ್ಟರ ಭಾಷಣ

ಲೇಬರಿನ ದಿನಾಚರಣೆಯಂದು ಅಮೆರಿಕದ ಪ್ರೆಸಿಡೆಂಟ್ ರೂಜ್‌ವೆಲ್ಟರು ಭಾಷಣಮಾಡುತ್ತ "ಹಿಟ್ಲರನನ್ನು ತಡೆದು ನಿಲ್ಲಿಸಿದೆ, ಅವನ ಹಾದಿಯನ್ನು ಕಟ್ಟಿದೆ ಎಂದು ತಿಳಿಯೆವುದು ತಪ್ಪು; ತ್ರುವು ಒಂದು ಯುದ್ಧದಲ್ಲಿ ಹಿಂದಿನ ವರ್ಷದಲ್ಲಿ ಹೊಂದಿದ ಅಭಿವೃದ್ಧಿಯನ್ನು ಯಾವಾಗ ಮಾಡದಿರುವನೋ ಆಗಲೇ ಅವನನ್ನು ಹೊಡೆಯಲು ನೋಡಬೇಕು" ಎಂದು ಅಮೆರಿಕದ ಟ್ರೇಡ್ ಯೂನಿಯನುಗಳು ಮಾಡುತ್ತಿರುವ ಸಹಾಯವನ್ನು ಶ್ಲಾಘಿಸಿ, ಹಿಟ್ಲರನು ಬಿಟ್ಟಿರುವ ಹುಚ್ಚು ಹಿಡಿದ ಬಲಪ್ರಯೋಗದ ಶಕ್ತಿಗಳ ಧ್ವಂಸದ ಕುರಿತಾಗಿ ಸೂಚಿಸಿದರು.

ಅಸಾಮ್ ಪ್ರಾಂತದ ಜನಗಣನೆ

ಅಸ್ಸಾಂ ಪ್ರಾಂತದಲ್ಲಿ "ಸೆನ್‌ಸೆಸ್" ತೆಗೆದ ವಿಚಾರದಲ್ಲಿ ಶ್ರೀ। ಜಿ. ಎನ್. ಬಾರ್ದೋಲಿಯವರು ಪ್ರಬಲವಾದ ತಮ್ಮ ಆಕ್ಷೇಪ ಹೂಡಿ ಪ್ರತಿಭಟಿಸಿದ್ದಾರೆ. "ಸೆನ್‌ಸಸ್ಸಿನ ಅಂಕೆಸಂಖ್ಯೆಗಳಲ್ಲಿ ಕೈಹಾಕಲಾಗಿದೆ; ಮತದ ನಿರ್ಣಯದಿಂದ ಜನಗಣನೆಯಾಗದೆ ಜಾತಿಯ ದೃಷ್ಟಿಯಿಂದ ಅದು ನಡೆದಿದೆ; ಹೀಗಾಗಿ ಹಿಂದೂ ಧರ್ಮಕ್ಕೆ ಸೇರಿದವರಲ್ಲಿ ಹಲವರನ್ನು ಹಿಂದೂಗಳ ಪಟ್ಟಿಯಲ್ಲಿ ಸೇರಿಸದೆ ಆ ಸಂಖ್ಯೆ ಕಡಿಮೆಯಾಗಿದೆ." ಹೀಗೆಂದು ಅವರ ಆಕ್ಷೇಪ. ಇನ್ನಿದರ ಕುರಿತು ಸರಕಾರದ ನಿರ್ಧಾರವೇನೆಂದು ತಿಳಿಯದಾಗಿದೆ. ಹೇಗೂ ಈ ಕುರಿತು ತಕ್ಕ ವಿಚಾರಣೆಯ ಶಾಸ್ತ್ರ ನಡೆಯದಿರದೆಂದು ಹಾರೈಸಬಹುದು.

ಗೂರಲು

ಅನೇಕ ವೈದ್ಯರಿಗೆ ತಿಳಿದಿರುವಂತೆ, ಈ ಖಾಯಿಲೆಯ ಮೇಲೆ ಸಾಧಾರಣವಾದ ಕೆಮ್ಮು ಔಷಧಿಗಳಿಂದ ಉಂಟಾಗುತಕ್ಷ್ಣ ಪರಿಣಾಮವೇನೂ ಇಲ್ಲ. ಕೆಲವು ವೇಳೆ ಅಪಾಯವುಂಟು.

• **ಟಸ್ಸನಾಲ್** ಸಾಧಾರಣ ಕೆಮ್ಮು ಔಷಧಿ ಅಲ್ಲ. **ಗೂರಲಿಗೆ** ಶಕ್ತಿಯುತವಾದ ಔಷಧಿಯೆಂದು ೫೦೦ ವರ್ಷಗಳ ಹಿಂದೆಯೇ ಪ್ರಸಿದ್ಧವಾದ **"ಮುಹ್ಯುಯಂಗ್"** ಎಂಬ ಚೈನೀ ಮೂಲಿಕೆಯಿಂದ ಆಧುನಿಕ ಶಾಸ್ತ್ರೀಯ ವಿಧಾನಗಳಿಂದ ತಯಾರಿಸಲ್ಪಟ್ಟ ಸಾರವೇ ಈ ನವೀನ ಶಾಸ್ತ್ರೀಯ ಕೆಮ್ಮಲಿನ ಷರಬತ್ತನ್ನು ತಯಾರಿಸಲು ಉಪಯೋಗಿಸುವ ಮುಖ್ಯಪದಾರ್ಥ. ಆದ್ದರಿಂದ, **ಗೂರಲು** ಎಂಬುದಾಗಿ ನಿರ್ದಿಷ್ಟವಾಗಿ ತಿಳಿದು ಬಂದಿರುವ ಸಂದರ್ಭದಲ್ಲಿ, **ಟಸ್ಸನಾಲನ್ನು** ಉಪಯೋಗಿಸಿದಲ್ಲಿ ಬೇರೆ ಯಾವ ಔಷಧವೂ ಬೇಕಿಲ್ಲ.

ಟಸ್ಸನಾಲ್ ಬೇನೆಯನ್ನು ಕಡಿಮೆ ಮಾಡುವುದಲ್ಲದೆ ತಪ್ಪದೆ ಉಪಯೋಗಿಸುತ್ತಿದ್ದರೆ ನರಗಳ ಮೇಲೆ ಕೆಲಸ ಮಾಡಿ ಈ ಖಾಯಿಲೆಯ ಕಾರಣವನ್ನೂ, ಗುರುತನ್ನೂ ಸಹ ನಿವಾರಣೆಮಾಡುತ್ತದೆ.

ಟಸ್ಸನಾಲ್ ಅನೇಕ ಗಂಟಲಿನ ಮತ್ತು ಶ್ವಾಸಕೋಶದ ಖಾಯಿಲೆಗಳು ಬಾರದಂತೆ ಮಾಡಲು ವಾಸಿ ಮಾಡಲು ಸಹಾಯಕಾದದ್ದು. ಎಲ್ಲ ವಿಧೇವಾದ ಕೆಮ್ಮು, ಶೀತ, ಬ್ರಾಂಕೈಟಿಸ್, ಗೂರಲು, ಕೆಮ್ಮಲು, ಲಾರಿಂಜಿಟಿಸ್, ಮತ್ತು ಶ್ವಾಸಕೋಶದ ಕ್ಷಯೆಗಳಿಗಾಗಿ ಇನ್ನು ಶಿಫಾರಸು ಮಾಡುತ್ತಾರೆ ಮತ್ತು ಬಳಸುತ್ತಾರೆ.

ನಿಮ್ಮ ಕೆಮಿಸ್ಟರಲ್ಲಿ

ಟಸ್ಸನಾಲ್

ಕೆಮ್ಮಲು ಸಹಿತವಾದ ಎಲ್ಲ ತೆರೆಯಿಲೆಗೂ ವಿಚಾರಿಸಿ ಪಡೆಯಿರಿ

ಮಾರ್ಟಿನ್ ಮತ್ತು ಹ್ಯಾರಿಸ್, ಲಿ.,

ಕಲ್ಕತ್ತಾ, ಬೊಂಬಾಯಿ.



ಈ ವಾರದ ಕಥೆ

ಈ ಗಂಡ * ಆ ಹೆಂಡತಿ!

ಹುಡುಗ ಅಂದರೆ ಅವನೇ ಒಬ್ಬ ಹುಡುಗ,—ಅಪ್ಪೋಜಿ. ಬಹು ಬುದ್ಧಿವಂತ! ಅವನ ಹಿರಿಯರೆಲ್ಲ ಬಿ. ಏಗಳೇ. ಅಪ್ಪೋಜಿಯೂ ಈಗ ಬೀ. ಏನೇ. ಬರೇ ಬಿ. ಏ. ಅಲ್ಲ—ಆನರ್ಸ್ ಬೀ. ಏ. ಜನ ರಲ್ಲು, ಅವನು ಮಹತ್ವದವಿಗೇರುವ ನಂದುಕೊಂಡಿದ್ದರು. ಅಷ್ಟು ಚಟು ಟಿಕೆ ಅವನದು.

ಅವನು ಐ. ಸಿ. ಯಸ್ ಪರೀ ಕ್ಷೆಗೂ ಹೋಗಿದ್ದ. ಆ ಪರೀಕ್ಷೆಗೆ ಹಲವ ರಿಗೆ ಪ್ರವೇಶ ದೊರಕುತ್ತದೆ; ಆದರೆ ತೀರಿಸುವುದು ಕೆಲವು ಮಂದಿಯನ್ನು ಮಾತ್ರ. ಹಾಗಾಗಿ ಅಪ್ಪೋಜಿಗೆ ಕಲೆ ಕ್ಟರೋ, ಜಡ್ಜಿಯೋ ಆಗುವ ಸೌಭಾಗ್ಯ ಸ್ವಲ್ಪದರಲ್ಲಿ ತಪ್ಪಿ ಹೋಯಿತು.

ಆದರೆ ಅಪ್ಪೋಜಿ ಐ. ಸಿ. ಯಸ್ ಚಾನ್ಸ್ ತಪ್ಪಿಹೋಯಿತೆಂದು ದುಃಖ ಪಡಲಿಲ್ಲ; ನಿರಾಶನಾಗಲಿಲ್ಲ. ನೆಟ್ಟಗೆ ಮನೆಗೆ ಬಂದ; ಮದುವೆ ಮಾಡಿಕೊಂಡ. ತನ್ನ "ಅಪಾರ ಮೇಧಾಶಕ್ತಿಯ್ಕ ಇತಿ ಮಿತಾಸ" ಮದುವೆಗೆ ಬೆಳದಿದ್ದ ಹೆಣ್ಣು ಸುಸ್ಕಳ ಹೆತ್ತವರಿಗೆಲ್ಲ ಜೆನ್ನಾಗಿ ಕಾಣುತ್ತಿತ್ತು. ಆದುದರಿಂದ ಅಪ್ಪೋಜಿ ಯನ್ನು ಅಳಿಯನನ್ನಾಗಿ ಮಾಡಿಕೊಳ್ಳು ವುದಲ್ಲಿ, ಆ ಹೆಣ್ಣು ಹೆತ್ತವರ "ಕಾಂಪಿಟೇ ಶನ್," ಆ ಸ್ಪರ್ಧೆ ಜೋರಾಗಿತ್ತು. ಕೊನಾಗಾಗಿ ಅಪ್ಪೋಜಿಗೆ ಅವರಲ್ಲಿ ತನಗೆ ಬೇಕಾದ "ಮಾವ"ನನ್ನು ಜುನಾಯಿಸು ವುದು ಸುಲಭವಾಯಿತು. ಆದರೆ ಒಮ್ಮೆಗೆ ಒಬ್ಬನೇ ಮಾವನನ್ನು ಆರಿಸಬೇಕಲ್ಲ ಎಂಬೀ ವ್ಯಥೆ ಬಲವಾಗಿತ್ತು.

ಹೇಗೂ ಅಪ್ಪೋಜಿ, "ಗಂಡು ಮಗ ಲ್ಲದ ಮಾವ," "ಇನ್ನು ಮಕ್ಕಳಾಗ ದಷ್ಟು ಬೊಜ್ಜು ಬೆಳೆದ ಅತ್ತೆ," "ಒಬ್ಬಳೇ ಮಗಳಿರುವ ಹೆತ್ತವರು," "ಯಥೇಷ್ಟ ಸಂಪತ್ತಿನಲ್ಲಿ ಹೊರಳುತ್ತಿರುವ ಹೆಣ್ಣಿನ ಅಪ್ಪ"—ಇವರನ್ನು ದೃಷ್ಟಿಯಲ್ಲಿಟ್ಟು ಕೊಂಡೇ, ಇವೆಲ್ಲ ಷರತ್ತುಗಳೂ ಒಟ್ಟಿಗೆ ಎಲ್ಲಿ ಪೂರೈಸಲ್ಪಟ್ಟಿದೆಯೋ, ಆ ಕುಟುಂಬ ದಿಂದಲೇ ಒಂದು ಹೆಣ್ಣು ತಂದು ಕೊಳ್ಳಲು ನಿರ್ಧರಿಸಿದ. ಅಪ್ಪೋಜಿಗೆ ತಾನೊಬ್ಬ "ಧಾರಾಳ ಸಮಯವಿರುವ ಸದ್ಗೃಹಸ್ಥ"ನಾಗಿ ಬಾಳಬೇಕೆಂದು ಆಸೆ; ಮತ್ತೆ ಆ ಧಾರಾಳ "ಪುರ್ಸೋತಿನ" ಗೃಹಸ್ಥಜೀವನದ ತಳಹದಿಗೆ, ನೆಲಗಟ್ಟಿಗೆ ಭಾರೀ ವರದಕ್ಷಿಣೆ ರಾಶಿಯೇ ಭದ್ರವಾದ ಆಧಾರವೆಂಬುದನ್ನು, ಅವನು ಬಿ. ಏ. ಕ್ಲಾಸಿನಲ್ಲೇ ಕಲಿತಿದ್ದ!

ಮದುವೆಯಾಗಿ ಅಪ್ಪೋಜಿ ನಾಲ್ಕು ದಿನ ಮಾವನ ಮನೆಯಲ್ಲಿರುವ ಕಾಲ ದಲ್ಲಿ, ಅವನ ಭಾವೀ ಪಾಂಡಿತ್ಯ ಪರೀಕ್ಷೆ ಚೆನ್ನಾಗಿ ಸಾಗಿತು. ಅವನು ಮಲಗು ವಾಗ "ಎನ್‌ಸೈಕ್ಲೋಪೀಡಿಯಾ" ಎಂಬ ಇಂಗ್ಲಿಷಿನ ದೊಡ್ಡ ನಿಘಂಟು ಬೂಕು ಗಳನ್ನು ತಲೆದಿಂಬಿನ ಕೆಳಗೆ ಇರಿಸಿ ಕೊಳ್ಳುವುದಿತ್ತು; ಬಾಯಲ್ಲಿ "ಒಮ್ಮರ್ ಖಾಯಮ್"ನ ಕೆಲ ಪ್ರವಚನಗಳನ್ನೋ, ಪದ್ಯಗಳನ್ನೋ ಬಾಯಿಪಾಠ ಹೇಳುವು ದಿತ್ತು; ಮಾವನೊಡನೆ "ಹಿಟ್ಲರನ ವಿಜ ಯ"ದ ಪ್ರಶ್ನೆಗಳನ್ನು ಕೇಳುವುದಿತ್ತು; "ಮಹಾತ್ಮರ ಅಹಿಂಸೆಯಿಂದ ಸ್ವರಾಜ್ಯ ಸಿಕ್ಕೀತೇ?" ಎಂದು ವಾದಕ್ಕೆ ಹೊರಡು ವುದಿತ್ತು; ಅತ್ತೆಯೊಡನೆ "ಭೂತ ಪಿಶಾಚಿ ಗಳ ಹೆದರಿಕೆ ನಿಮಗೆ ಉಂಟೆ?" ಎಂದೂ ಒಮ್ಮೆ ಕೇಳಿದುದಿತ್ತು. ಹೆಂಡತಿಯೊಡನೆ ಮೊದಲಿನ ಪ್ರಶ್ನೆಯಾಗಿ, ಒಂದು ವೇಳೆ "(ಕಲ್ಕತ್ತೆಯ?) ಕತ್ತಲೆಯ ಕೋಣೆ"ಯ ವಿಷಯವಾಗಿ ವಿಚಾರಿಸಿದುದೂ ಇರ ಬಹುದು! ಇವೆಲ್ಲ ಅವನ ಪಾಂಡಿತ್ಯ ಪ್ರದರ್ಶನದ ನಿದರ್ಶನ. ಎಷ್ಟಾದರೂ ಐ. ಸಿ.ಯಸಿನ ಹೆಬ್ಬಾಗಿಲ ವರೆಗೆ ಹೋಗಿ 'ವಾಪಾಸು' ಬಂದ ಗೌರವಸ್ಥ.

ಅಪ್ಪೋಜಿಯ ಹೆಂಡತಿ ಜಾನಕಿ, ಮದುವೆಯಾದ ಅನಂತರದ ಕೆಲ ದಿನ ಗಳನ್ನು, ಗಂಡನೊಡನೆ ನಾಚಿಗೆಯ ಲ್ಲಿಯೇ ಕಳೆದರೂ, ಅವಳಿಗೆ ಗಂಡನ ಈ ಹುಚ್ಚಾಟದ ಸ್ಥಿತಿ ತಿಳಿಯದೆ ಹೋಗ ಲಿಲ್ಲ. ಅವಳು ಈಗ ಈ ಗಂಡನನ್ನು "ಹದಮಾಡಲು," ದಾರಿಗೆ ತಿರುಗಿಸಲು ಹವಣಿಸಿದಳು. ಅವಳು ಈ ಇಂಥ ಬುದ್ಧಿವಂತೆ ಗಂಡನಿಗೆ ಯಾವ ಸ್ಥಾನ ಕೊಡಬೇಕೆಂದು ನಿರ್ಧರಿಸಿದಳು; ಅದ ರಂತೆ ಆಚರಿಸುತ್ತ ಬಂದಳು.

ಜಾನಕಿ ಶ್ರೀಮಂತರ ಮನೆಯ ಹೆಣ್ಣು. ಹೆತ್ತವರಿಗೆ ಸಂತಾನವೆಂದರೆ ಈಕೆ ಒಬ್ಬಳೇ ಮಗಳು; ಅವಳ ತಂದೆ ಮೊದಲು ಬಡವರು; ಅವರು ವ್ಯಾಪಾರಿ ಗಳಾಗಿದ್ದು, ಅನಂತರ ಹಿಂದಿನ "ಯುದ್ಧ ಕಾಲದಲ್ಲಿ ಒಂದಕ್ಕೆ ಹತ್ತರಷ್ಟು ದರ ವೇರಿದ ಸಂದರ್ಭ"ದಲ್ಲಿ ದೊಡ್ಡ ಶ್ರೀಮಂ ತರಾದವರು. ಆದರೂ, ಅವರ ಹೆಂಡತಿ, ಐಶ್ವರ್ಯ ಬಂದ ಮೇಲೂ, ತನ್ನ ಮೊದ ಲಿನ ಬಡತನದ ಜೀವನ, ಹಳೇ ಸಂಪ್ರ ದಾಯಗಳನ್ನು ಬಿಟ್ಟಿರಲಿಲ್ಲ. ಹಾಗಾಗಿ ಅವರದು ಸಾದಾ ಜೀವನ; ಶ್ರೀಮಂತರ ದರ್ಬಾರ್‌ಗಿರಿಯಿಲ್ಲ. ಅಂತೇ ಅವರು, ಮಗಳಿಗೂ "ಉಚ್ಚ ವಿದ್ಯಾಭ್ಯಾಸ" ಕೊಟ್ಟು, "ದಿನಕ್ಕೊಂದು ಫ್ಯಾಶನ್" ಕಲಿಸಿರಲಿಲ್ಲ; ತಕ್ಕಷ್ಟು ಓದುಬರಹ, ಬೇಕಾದಷ್ಟು ಮನೆಗೆಲಸಗಳನ್ನೇ ಕಲಿಸಿ ದ್ದರು; ಷಾಕ ವಿಶ್ವವಿದ್ಯಾಲಯದಲ್ಲಿ ಅವ ಳನ್ನು I ಕ್ಲಾಸ್ ಪಾಸ್ ಮಾಡಿಸಿ ಬಿಟ್ಟಿ ದ್ದರು.

ಇಂಥ ಜಾನಕಿಗೆ ತನ್ನ ವಿದ್ಯಾವಂತ ಗಂಡನ ಪಾಂಡಿತ್ಯದಲ್ಲಿ ಆಸಕ್ತಿಯಾಗಲೀ, ಆದರವಾಗಲೀ ಕುತೂಹಲವಾಗಲೀ ಕೊಂಚವೂ ಹುಟ್ಟದುದೇನೂ ಆಶ್ಚರ್ಯ ವಲ್ಲ. ಅಪ್ಪೋಜಿ ಅವಳ ಮುಂದೆ ಕವಿತೆ ಗಳ ಚರಣಗಳನ್ನು ಹಾಡುವನು; "ಬಂದ, ತಿಂದ, ಆಂದ, ಸೊಂದ, ಚೆಂದ"—ಇಂಥ ಪ್ರಾಸಗಳ ಹೊರೆಯೇಕೆ ಪದ್ಯಗಳಿಗೆ ಎನ್ನುವನು; ಷೇಕ್ಸ್‌ಪಿಯರ್ ನಾಟಕಗಳ ಭಾಗಗಳನ್ನು ಓದಿ ಹೇಳುವನು; "ಎನ್ ಸ್ಯಾಕ್ಲೋಪೀಡಿಯ"ವನ್ನು ನಿನಗೆ ಕಲಿ ಸುವೆನು" ಎನ್ನುವನು. ಆದರೆ ಜಾನ ಕಿಗೆ ಅದೊಂದೂ ಬೇಡ. ಅವಳಿಗೆ ಬೇಕಾದುದು ತರಕಾರಿ, ಅಕ್ಕಿ ಬೇಳೆ ವಿಚಾರ; ಹಬ್ಬ ಹುಣ್ಣಿಮೆ, ಮಡಿ ಮೈಲಿಗೆ ಆಚಾರ; ಗೃಹಕೃತ್ಯ; ಮನೆಗೆಲಸ ದವಳ ಸಂಸಾರ ತಾಪತ್ರಯದ ಹರಟೆ; ನೆರೆಮನೆಯವಳ ಹೊಸ ಸೀರೆಯ ಮಾದರಿ—ಇಂಥವೇ.

ನಮ್ಮ ಅಪ್ಪೋಜಿಗೆ ಜಾನಕಿಯ ಈ ಹಳೇ ಮರ್ಜಿಯೊಂದೂ ಸರಿಬೀಳುತ್ತಿರ ಲಿಲ್ಲ. ಅವಳನ್ನು "ಅಸ್–ಟು–ಡೇಟ್" "ವಿದ್ಯಾವತಿಯರ" ಸಾಲಿಗೆ ತರಲು ಅವ ನೆಷ್ಟೋ ಪ್ರಯತ್ನ ಮಾಡಿದನು; "ಆಧು ನಿಕ ನಾಗರಿಕ ಮಹಿಳೆ"ಯನ್ನಾಗಿ ಮಾರ್ಪಡಿಸಲು ಬಹುವಾಗಿ ಪ್ರಯತ್ನಿಸಿ ದನು. ಅವನು ಅವಳಿಗೆ ವಿಜ್ಞಾನದ ಮಹತ್ವಗಳನ್ನು ತಿಳಿಸುವನು; ಗ್ರಹಣವು ರಾಹುಕೇತುಗಳಿಂದಾಗುವುದಲ್ಲ ಎನ್ನು ವನು; ಜಗತ್ತಿನಲ್ಲಿ ಹಸೀ ಪದಾರ್ಥಗಳು ಎಲ್ಲೆಲ್ಲಿಂದ ಒದಗುವುದೆಂಬುದನ್ನು ಉಪ ದೇಶಿಸುವನು. ಇಷ್ಟಕ್ಕೆಲ್ಲ ಜಾನಕಿಯ ಉತ್ತರ ಒಂದೇ–"ಸಾಕು ಮಾಡಿ, ನಿಮ್ಮ ಪಾಂಡಿತ್ಯ; ನೀವು "ವಾನರ್ಸ್" ಪರೀಕ್ಷೆ ಮಾಡಿದ್ದೀರೆಂಬುದು ನನಗೆ ತಿಳಿದಿದೆ."

ಏನು ಮಾಡಿದರೂ ಜಾನಕಿಗೆ ಬುದ್ಧಿ ತಿರುಗಲಿಲ್ಲ. ಅಪ್ಪೋಜಿ "ಸತ್ಯಾಗ್ರಹ" ಹೂಡಿದರೂ, ಜಾನಕಿ "ಅಹಂಕಾರಕ್ಕೆ ಉದಾಸನವೇ ಮದ್ದೆಂದು" ಮಾಡಿ ಬಿಟ್ಟಳು. ದೇವರು, ಅದೃಷ್ಟಗಳಲ್ಲಿ ವಿಶ್ವಾ ಸವಿಲ್ಲದೆ, ಪಾಂಡಿತ್ಯ, ವಿದ್ಯಾಬಲಗಳಲ್ಲೇ ವಿಶ್ವಾಸವಿರಿಸಿದ್ದ ಅಪ್ಪೋಜಿ ಈಗ, ಜಾನ ಕಿಯ ಮದುವೆಯ ದೆಸೆಯಿಂದ, ಆ ಅವಿ ಶ್ವಾಸ ಮತ್ತು ವಿಶ್ವಾಸಗಳ ಕುರಿತಾದ ತನ್ನ ಹಿಂದಿನ ಅಭಿಪ್ರಾಯವನ್ನೆಲ್ಲ ಬದ ಲಾಯಿಸಬೇಕಾಯಿತು.

ತನ್ನ ಸಂಸಾರದ ಜೀವನದಲ್ಲಿ ಇನ್ನು ತನ್ನ ಸಹಚರಿಯೊಡನೆ ಹೋರಾಡುವುದು

(೧೪ನೇ ಪುಟಕ್ಕೆ ಮುಂದುವರಿಸಿಯದೆ)

To serve you —
— Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.
ESTD: 1906.

ನಾನು ಹೇಳುತ್ತಿದ್ದಲ್ಲವೇ ಮೊದಲು

ಪುರೋಹಿತ ಶ್ವಾಸಹಾರೀ ತೆಗೆದುಕೊಳ್ಳಿರಿ ಅಂತಾ



ದಮ್ಮು ಒಮ್ಮೆಲೇ ನೆಟ್ಟಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕ ಗುಣಕೊಡುವ ಔಷಧ ತೆಗೆದುಕೊಂಡು ಬೇಸತ್ತು ಹೋಗಿದ್ದಾರೆ. **ಪುರೋಹಿತ ಶ್ವಾಸಹಾರಿಯು** ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣ ಮಾಡುವ ಉತ್ಕೃಷ್ಟ ಶಾಸ್ತ್ರೀಯ ಉಪಾಯವು. ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವದು, ತೇಕು ಕಡಿಮೆಯಾಗುವದು, ಶೌಚದ ತೊಂದರೆ ಉಳಿಯುವದಿಲ್ಲ, ಪಚನ ಕ್ರಿಯೆಯು ತಿದ್ದುವದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಪ್ಪುಸ ಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವದು.

ದಮ್ಮು, ತೇಕು, ಥೇಕರಿಕೆ, ಗಂಟಲು ಉರಿಯುವಂಥ ಕೆಮ್ಮು ಮತ್ತು ಪುಪ್ಪುಸದ ಎಲ್ಲ ವಿಕಾರಗಳಿಗೆ **ಪುರೋಹಿತ ಶ್ವಾಸಹಾರಿ** ಫ್ಲೇನ (ಪ್ಯಾಕಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತೂ ಆಮ್ಲಪಿತ್ತ ದಮ್ಮು ಹತ್ತಿದವರು **ಶ್ವಾಸಹಾರೀ ಕೆಂಪೌಂಡ** (ಕೆಂಪು ಪ್ಯಾಕಿಂಗ್) ಕೊಂಡರೆ ಹೆಚ್ಚು ಗುಣ. ರೂ. ೨—೨—೦; ರೂ. ೩—೦—೦; ರೂ. ೬—೮—೦ ಕೆಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲ [illegible] ಸಿಗುವವು. ತರಿಸಿಕೊಳ್ಳುವ ವಿಳಾಸ:- **ಡಾ. ಪುರೋಹಿತ ಫಾರ್ಮೆಸಿ,** [illegible]ಲ್ಹಾಪುರ. ಇಲ್ಲವೆ **ಮೆ. ವನಮಾಳೀ ಭಿಖಾ ಮತ್ತು ಕಂ.,** ಪ್ರಿನ್ಸೆಸ್ ಸ್ಟ್ರೀ[illegible], ಮುಂಬಯಿ.

ಪುರೋಹಿತ ಶ್ವಾಸಹಾರಿ

ಕಳೆದ ವಾರ

ಪೂರ್ವ ದೇಶಗಳ ಪರಿಸ್ಥಿತಿ

ಇನ್ನೂ ಸುಧಾರಿಸಿಲ್ಲ. "ಜಪಾನು ಕ್ರಮಶಃ ಹತ್ತಿರವಾಗುತ್ತಿದೆ" ಎಂದು ತಿಳಿಯಬಹುದೇಕೆಂದರೆ, ಜಪಾನೀ ಸೇನೆಗಳು ತ್ಯಾಲ್ಯಾಂಡಿನ ದಕ್ಷಿಣ ಇಂಡೋ ಚೀನದ ಗಡಿಗಳ ಬಳಿಯಲ್ಲಿ ಬಂದು ತುಂಬಿ ಕೊಂಡಿರುವುದರಿಂದಲೇ. ಈ ಸಂದರ್ಭ ದಲ್ಲಿ ಮಲಯದ ಗವರ್ನರರ ಎಚ್ಚರಿಕೆಯ ಮಾತು ಕೇಳಿ! "ಜಪಾನು ಏಕ್ಸಿಸ್ ರಾಷ್ಟ್ರಗಳ ಒಂದು ಅಖಂಡ ಪಾಲುಗಾರ. ನಾವು ನಿಜ ವಿದ್ಯಮಾನಗಳನ್ನು ಅಸಡ್ಡೆ ಮಾಡುವಲ್ಲಿ ಉಪಯೋಗವಿಲ್ಲ. ನಮಗೆ ದೂರದ ಪೂರ್ವದಲ್ಲಿ ಯುದ್ಧ ಬೇಕಿಲ್ಲ. ನಾವೇನೂ ಜಗಳಗಂಟರಲ್ಲ. ಆದುದರಿಂದ ಅಲ್ಲಿ ಯುದ್ಧ ಸಂಭವಿಸಿದರೆ ಅದು ನಮ್ಮ ಯಾವ ಕಾರ್ಯಭಾರದ ಫಲವೂ ಅಲ್ಲ. ನಷ್ಟುಗೆ ಶಾಂತಿ ಬೇಕು. ಮತ್ತೆ ಅದು ಸಿದ್ಧಿಸಬೇಕಾದರೆ, ನಾವು ಜಗಳ ಗಂಟತನದ ವಿರುದ್ಧವಾಗಿ, ಒಮ್ಮತದ ದೃಢ ಸಂಕಲ್ಪವನ್ನೇ ಪ್ರಕಟಿಸಬೇಕು. ನಮ್ಮ ಮೈ ಮೇಲೆ ಎಲ್ಲಿಯಾದರೂ ಆವರು ಬಿದ್ದರೆ, ನಾವು ವಿಜಯಸಿದ್ಧಿಯ ವರೆಗೂ ಕಾದಾಡುವುದೇ ನಿಜ. ಆಗ ಬ್ರಿಟನಿನ ಜನರು ತೋರಿರುವ ಆಧೈರ್ಯ ಸ್ಥೈರ್ಯಗಳನ್ನೇ, ಶಾಂತಭಾವ, ಆತ್ಮ ಬಲಿಯನ್ನೇ ಮಲಯದ ಜನರು ತೋರು ವರೆಂದೂ ನಾನು ನಂಬಿದ್ದೇನೆ." ಇದರಿಂದ ಜಪಾನರ ಅಂತರಂಗದ ನೆಲೆ ಯಾವುದೆಂದು ಇನ್ನೂ ತಿಳಿದಿಲ್ಲವಾಗಿ ಅರ್ಥವಾಗದೇ?

* * * *

ಬ್ರಿಟಿಷ್ ಪತ್ರಿಕೆಗಳ ಇದೇ ವಿಚಾರದ

ಸಂದೇಹದ ನುಡಿಗಳೂ ಮರೆಯ ತಕ್ಕವಲ್ಲ! ಇಂಡೋ ಚೀನದ ಅಭಿಯೋಗದ ಬಳಿಕ, ಪೂರ್ವ ದೇಶದಲ್ಲಿ ಭೀತಿಗೆ ಕಾರಣವಾದ ಹೊಸ ಘಟನೆಗಳೇನೂ ತೋರಿಕೆಯ ಮಟ್ಟಿಗೆ ನಡೆದಿಲ್ಲ. ನಿಜ. ಅಷ್ಟು ಮಾತ್ರದಿಂದ,—ಜಪಾನು ತನ್ನ ಹೊಸ ಕಾರ್ಯಕ್ರಮಕ್ಕೆ ಕಾಲಿಡುವ ಮೊದಲು,—ತನ್ನ ಮಿಲಿಟರಿ ಮತ್ತು ಆರ್ಥಿಕ ಸ್ಥಿತಿಯ ಸಂಘಟನೆಯನ್ನು ಮರೆತೀತು ಎಂದೇನೂ ಹೇಳಬರುವಂತಿಲ್ಲ. ಅತ್ತ ವಾಷಿಂಗ್‌ಟನ್ನಿನಲ್ಲಿ ಜಪಾನಿನವರು "ಶಾಂತಿಯ ಮಾತು"ಗಳನ್ನಾಡುತ್ತಿರುವಾಗಲೇ, ಇತ್ತ ಪ್ರಿನ್ಸ್ ಕೊನೊಯ್ ರವರು "ಜಪಾನಿಗೆ ತನ್ನ ಇತಿಹಾಸದಲ್ಲೇ ಇದುವರೆಗೆ ಇಂತಹ ಗಭೀರ ಸಂದು ಕಟ್ಟಿನ ಸಮಯ ಒದಗಿಲ್ಲ"ವೆಂದುದೂ ಅತಿ ವಿಚಿತ್ರ. ಜಪಾನು, ಅದಕ್ಕೆ ಹಕ್ಕಿಲ್ಲದಿದ್ದರೂ, ಅಮೆರಿಕದಿಂದ ರಫ್ತಿಗೆ ಯುದ್ಧ ಸಾಮಗ್ರಿಗಳು, ವ್ಹಾಡಿವೋಸ್ಟಾಕಿನ ಮೂಲಕ, ಸಾಗುವುದು ತಪ್ಪೆಂದು ಒಮ್ಮೆ ಆಕ್ಷೇಪಿಸಿದುದು ಜಪಾನಿನ ಸೊಕ್ಕಿನ ಪರಮಾವಧಿಯಾಗಿದೆ; ಇಷ್ಟರ ಮೇಲೂ, ಜಪಾನು ನಿಷ್ಪ್ರಯೋಜನವಾಗಿ ಅದೇ ಆಕ್ಷೇಪವನ್ನೇ ಇನ್ನೊಮ್ಮೆಯೂ ಮುಂದೊತ್ತಿರುವುದನ್ನು ನೋಡಿದರೆ, ಅದು ಕೇವಲ ಬಗಳೆ, ಈ ಬಗಳೆ ರಗಳೆಯಿಂದ ವಾಷಿಂಗ್‌ಟನ್ನಿನ ಮಾತುಕತೆಗಳ ವಾತಾವರಣವೇನೂ ಉತ್ತಮಗೊಳ್ಳವು ಎಂದು ತೋರದೆ?—ಹೀಗೆಂದು ಆ ಪತ್ರಿಕೆಗಳ ವಿಚಾರ ಏಮರ್ಶೆ!

* * * *

ಇನ್ನೂ ಒಂದು ಮಾತು!

ಅಮೇರಿಕದ ಮಿಲಿಟರಿ ಮಿಶನ್ ಒಂದು ಚೀನಕ್ಕೆ ಸಹಾಯಕೊಡಲು ಅತ್ತ ರವಾನಿಸಲ್ಪಟ್ಟಿದೆ. ಅಂದರೇನು? ಪ್ರೆಸಿಡೆಂಟ್ ರುಜ್‌ವೆಲ್ಟರಿಗೆ ಜಪಾನನ್ನು ಬೆನ್ನು ತಟ್ಟಿ ಸಮಜಾಯಿಸುವ ಯೋಜನೆ ಇಲ್ಲವೆಂದಲ್ಲವೇ? ಅನ್ನುವಾಗ, ಜಪಾನಿನ ಈಗಿನ ಈ ಕಪಟ ಅಭಿನಯವೆಲ್ಲ "ಹೊತ್ತು ಕಳೆಯಲಿಕ್ಕೆ;"— "ತನ್ನ ಸಮಯ ಬಂದಾಗ, ಹೊಸ ಆಕ್ರಮಣಕ್ಕಾಗಿ ತಕ್ಕ ಹಿನ್ನಲೆ ಏರ್ಪಡುವಂತೆ, ಅಮೆರಿಕದವರ ಅಭಿಪ್ರಾಯವನ್ನು ವಿಭಾಗಿಸಿ ಬಿಡಲಿಕ್ಕೆ" ಎಂದೇ ತಿಳಿಯಬಾರದೇಕೆ? ಇನ್ನು ಅಮೇರಿಕದ ಪ್ರೆಸಿಡೆಂಟರ ಹಾಗೂ ಪ್ರಿನ್ಸ್ ಕೊನೊಯ ಯವರ ಆ "ಭೇಟಿ"ಯಾದರೂ ಡೆಮೊಕ್ರೆಸಿಗಳ ಬಾಂಧವ್ಯದ ವಿಚಾರದಲ್ಲಿ, ಜಪಾನು ಇಂದಿಗಿಂತಲೂ ಹೆಚ್ಚಿನ ನಿರ್ವಂಚನೆ ಬುದ್ಧಿಯ ರುಜುವಾತುಗಳನ್ನು ಕೊಡದೆ, ಆ ಭೇಟಿ ನಡೆಯುವುದೆಂದರೇನು ಹುಡುಗಾಟವೇ? ಹೇಗೂ, ಜಪಾನು, ಹಿಟ್ಲರನಂತೆ, ಅತ್ತ "ಸಂಧಾನದ ವ್ಯವಹಾರಗಳು ಸಾಗಲಿ, ಇತ್ತ ಯುದ್ಧಯೋಜನೆ ಮುಂದುವರಿಯಲಿ" ಎಂಬೀ ವೇಷವನ್ನು ಹಾಕಿಕೊಂಡು ಕುಣಿಯುತ್ತಿದ್ದರೆ, ಯಾರೂ ಆ ಎರಡು ಮುಖದ ಆ "ಹಳೇ ಯುಕ್ತಿ"ಯಿಂದ ಮೋಸ ಹೋಗುವವರಿಲ್ಲ. ಇದನ್ನು ಜಪಾನ್ ಖಂಡಿತ ತಿಳಿಯಬೇಕು.

PHONE WITH A Smile
TALK DIRECTLY INTO THE TELEPHONE
ಟೆಲಿಫೋನ್ ಉಪಯೋಗಿಸುವ ಸರಿಯಾದ ಕ್ರಮವೆಂದರೆ, ಮಾತನಾಡುವಾಗ ಟ್ರಾನ್ಸ್‌ಮಿಟರ್ ತುಟಿಗಳಿಗೆ ಎದುರಿರಬೇಕು.
SPEAK PLEASANTLY
ನಿಮ್ಮಷ್ಟೇಹಿತನೋ, ಒಳ್ಳೇ ಗಿರಾಕಿಯೋ ಇರಬಹುದು. ಪ್ರತ್ಯಕ್ಷ ಮಾತನಾಡುವಂತೆ ಉಲ್ಲಾಸವಾಗಿ ಸ್ವಾಗತಿಸಿ ಉಲ್ಲಾಸೀ ಜನರು ಜೀವನದಲ್ಲಿ ವಿನೋದ ಪಡೆಯುತ್ತಾರೆ.
ANSWER PROMPTLY
ಉತ್ತರಿಸುವಾಗ ತಡವೆಂದರೆ, ಮಹತ್ವದ ಒಂದು ಕೆಲಸ ಕಳಕೊಂಡಂತೆ. ಕರೆ ಕಳುಹಿದವನು ಕೇಳುವನವರಿಲ್ಲವೆಂದು ನಿಶ್ಚಯಿಸಿ ಬಿಡಬಹುದು.
DON'T SHOUT
ಯಥಾವಸ್ಥಿತ ಸ್ವರವೇ ಉತ್ತಮ. ಗುಣುಗುಟ್ಟಿದರೆ ಸ್ಪಷ್ಟವಾಗದು. ಬೊಬ್ಬಿಟ್ಟರೆ ಸ್ವರ ಬಿರುಸುಗೊಂಡು ಇಂಪುಗೆಡುವುದು.
HANG UP GENTLY
ವಿಚಾರವಿಲ್ಲದೆ ರಿಸೀವರನ್ನು ದೊಪ್ಪನಿಟ್ಟರೆ, ನಿಮ್ಮೊಡನೆ ಮಾತನಾಡುತಿದ್ದವನಿಗೆ ಅಸಭ್ಯವಾಗಿ ಕಾಣುವುದು. ಮೆಲ್ಲಗೆ ತೂಗುಹಾಕುವುದುತ್ತಮ.
A GREAT ASSET IN BUSINESS & SOCIAL LIFE
FOR PARTICULARS APPLY TO DIVISIONAL ENGINEER, TELEGRAPHS No 10


ಚರ್ಮ ಮತ್ತದರ ಹೊಟ್ಟಿನ ಬಾಧಕಗಳಿಗೆ ಸಾಂಬಕನ್ನು ನಂಬಿಕೊಳ್ಳಿ
ಶ್ರೇಷ್ಠ ವಿಷ್ಣುಕಾರಕ ಮುಲಾಂ
ತಲೆ ತೊಗಲ ತುರಿಕೆ, ಹುಳುಕಡ್ಡಿ, ಹೆಡಸು, ಮತ್ತಿನ್ನಿತರ ಚರ್ಮಬಾಧಕಗಳಲ್ಲಿ, ಸಾಂಬಕ್ ರೋಗಗಳನ್ನು ಪರಿಹರಿಸಿ, ಕೂದಲನ್ನೂ ತಲೆ ತೊಗಲನ್ನೂ ಬಲವರ್ಧಿಸಿ ಆರೋಗ್ಯವಾಗಿಡುವ ಒಂದು ಖಾತರಿ ಚಿಕಿತ್ಸೆ. ಸಾಂಬಕ್‌ನಲ್ಲಿರುವ ಉತ್ತಮ ವನಸ್ಪತಿ ತೈಲಗಳು ಚರ್ಮದೊಳಕ್ಕೆ ಸುಲಭವಾಗಿ ಹೀರಿಕೊಳ್ಳಲ್ಪಡುವುದರಿಂದ, ನೋವು ಉಪಶಮನಗೊಂಡು, ಉರಿಬಾವು ತಗ್ಗಿ ಸೋರುವುದು ಆರುತ್ತದೆ. ಸಾಂಬಕ್ ಒಂದೂ ಕಲೆಯುಳಿಯದಂತೆ ಗುಣಪಡಿಸುತ್ತದೆ.
ಸಾಂಬಕ್ ಒಂದು ರೂಪ್ಯಾ ಅಥವಾ ರೂ. 2–4–0; ಸಾಬೂನ್ ರೂಪ್ಯಾ ಒಂದು. ಪೌಡರು ಒಂದು ರೂಪ್ಯಾ.
ಏಜೆಂಟರು:— ಮೆಸರ್ಸ್ ದಾಧಾ & ಕೊ., ಪಿ. ಟಿ. ಮದ್ರಾಸು.
ಯಾವಾಗಲೂ ಸಾಂಬಕ್ ಉಪಯೋಗಿಸಿ
ZAM-BUK
ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ

ಮರಣ ದಂಡನೆ

ಕಾಸರಗೋಡು ತಾಲೂಕಿನ ಕಲ್ಲಾಡು ಗ್ರಾಮದ ಲಿಂಬಾಡಿ ಎಂಬಾತ ಕಳೆದ ಫೆಬ್ರವರಿಯಲ್ಲಿ ೧೭ ವರ್ಷದ ಒಬ್ಬ ಹುಡುಗನನ್ನು ಗುಡ್ಡೆಗೆ ಕರೆದುಕೊಂಡು ಹೋಗಿ ಅಲ್ಲಿ ಅವನ ಒಂಟಿ ಉಡುದಾರಗಳನ್ನು ಜಾರಿಸಿ ಅವನ ಕೊಲೆ ಮಾಡಿದನೆಂಬ ಮೊಕದ್ದಮೆಯ ತನಿಖೆ ನಮ್ಮಡಿ। ಸೆಶ್ಶನ್ಸ್ ಜಡ್ಜರ ಮುಂದೆ ನಡೆಯಿತು. ಕೊಲೆಯ ಕೃತ್ಯವನ್ನು ಕಂಡ ಸಾಕ್ಷಿಗಳಿರಲಿಲ್ಲ. ಆರೋಪಿ ಆ ಉಡುದಾರವೆಂಬುದನ್ನು ಮಾರಲು ತಂದಾಗ ಅನುಮಾನದ ಮೇಲೆ ಕೈದು ಮಾಡಿ ಮೊಕದ್ದಮೆ ಹೂಡಲಾಗಿತ್ತು. ಆರೋಪಿ ಅದು ತನ್ನಲ್ಲಿ ಅಡಎಟ್ಟ ನೂಲು ಎಂದನು. ಮೂವರು ಎಸೆಸರರು ಆರೋಪಿ ಅಪರಾಧಿ ಎಂದು ಅಭಿಪ್ರಾಯಪಟ್ಟರು. ಜಡ್ಜರೂ ಅದನ್ನೇ ಅನುಮೋದಿಸಿ ಲಿಂಬಾಡಿಗೆ ಮರಣ ದಂಡನೆ ವಿಧಿಸಿದರು.

ಮಹನೀಯರ ಪ್ರೇಮಪ್ರದರ್ಶನ

ಕೆಲವು ಸ್ವಾರಸ್ಯಕರ ಸಂಭವಗಳು

[ಲೇಖಕರು:—ಶ್ರೀ। "ಬೋಳಾರ"]

ವಿಜಯಿಯಾದ ವಿಲ್ಲಿಯಂ

ಮ್ಯಾಟಿಲ್ಡಾ ತುಂಬಾ ಹೆಮ್ಮೆಪಟ್ಟು ಕೊಳ್ಳುತ್ತಿದ್ದಳು; ತಾನು ಉತ್ತಮ ಕುಲ ಪ್ರಸೂತಳು ಎಂದು. ನೋರ್ಮಂಡಿಯ ದೊರೆ ವಿಜಯಿ ವಿಲ್ಲಿಯಂ ಆಕೆಯನ್ನು ವರಿಸಲಿಚ್ಛಿಸುವುದಾಗಿ, ಯಾರೋ ಅವಳೊಡನೆ ಹೇಳಿದಾಗ ಮ್ಯಾಟಿಲ್ಡಾ ಉರಿದು ಬಿದ್ದು, ನಕ್ಕು, "ಅಲ್ಲ, ಆ ಕೀಳು ಜಾತಿಯವನಿಗೂ ಇಂತಹ ಧೈರ್ಯವೆ?" ಎಂದಿದ್ದಳು.

ವಿಲ್ಲಿಯಂ ಇದನ್ನು ಕೇಳಿದ. ಒಂದು ದಿನ ಕುದುರೆ ಸವಾರಿ ಮಾಡುತ್ತ, ನೇರವಾಗಿ ಅವಳ ತಂದೆಯ ಮನೆಗೆ ಸಾಗಿದ. ಮ್ಯಾಟಿಲ್ಡಾ ವಿಲ್ಲಿಯಂ ಇಬ್ಬರೂ ಸಿಡಿಮಿಡಿಗೊಂಡರು. ಇಬ್ಬರದೂ ಮುಂಗೋಪದ ಸ್ವಭಾವ. ಈ ಎಡೆಯಲ್ಲೇ ವಿಲಿಯಂ ಹೇಳಿದ "ನನ್ನನ್ನು ಈಗ ಸ್ವೀಕರಿಸುತ್ತಿಯಾ? ನಿನ್ನನ್ನಲ್ಲದೆ ಬೇರಾರನ್ನೂ ನಾನು ಆಶಿಸೆನು" ಎಂದು. ಆಕೆ ದಂಗು ಬಡಿದುಹೋದಳು.

ಬಳಿಕ ಹೇಳಿದಳು "ಅಂತಹ ಧೈರ್ಯ ಬೇಕಾರಿಗೆ ಬರಬೇಕು? ಅವನನ್ನಲ್ಲದೆ ಬೇರಾರನ್ನೂ ನಾನು ವರಿಸೆನು," ಎಂದು.

ಅಂತೂ ನಿಜವಾಗಿಯೇ ವಿಲ್ಲಿಯಂ ವಿಜಯಿಯೆನ್ನಿಸಿಕೊಂಡ.

ಎಂಟೆನೆಯ ಹೆನ್ರಿ

ಈತ ತನ್ನ ಪ್ರೇಯಸಿ ಏನ್ನಿ ಬೋಲಿನಳಿಗೆ ದೀರ್ಘವಾದ ಪ್ರಣಯ ಪತ್ರ ಬರೆದ. ಒಂದರಲ್ಲಿ ಒಂದಂಶ ಹೀಗಿತ್ತು: "ನಿನ್ನ ಕೊನೆಯ ಪತ್ರವನ್ನು ಕಂಡು, ನೆನ್ನೆಲ್ಲೇತರದೋ ಒಂದು ವಿಧದ ಹೃದಯವೇದನೆಯಾಗುತಿದೆ. ದಯೆ ವಿಟ್ಟು, ನನ್ನ ನಿನ್ನೊಳಗಿನ ಪ್ರಣಯದ ರೂಪವೆಂತಹದೆಂದು ತಿಳಿಸು.....?

"ಬರೆಯುವುದು ಕಷ್ಟವಾಗಿದ್ದರೆ, ನಾನು ನಿನ್ನನ್ನು ಸಂಧಿಸಬಹುದಾದ ಸ್ಥಳ, ಸಮಯಗಳನ್ನು ಸೂಚಿಸು. ನಾನೇ ಬರುವೆನು. ಈ ಪತ್ರವನ್ನು ಬರೆದುದು, ನಿನ್ನವನಾಗಿ ಬಾಳಲಿಚ್ಛಿಸುವವನೊಬ್ಬನ ಕೈ."

ಈ ಮಹಾನುಭಾವನೇ ಅರ್ಧ ಡಜನ್ ಹೆಂಗಳೆಯರನ್ನು ಮದುವೆಯಾದವನು.

ನೆಪೋಲಿಯನ್ ಹೇಗೆ ಬರೆದ?

ಜೊಸೆಫೈನಳಲ್ಲಿ ನೆಪೋಲಿಯನನಿಗೆ ಮಕ್ಕಳಾಗಲೇ ಇಲ್ಲ. ಪುನರ್ವಿವಾಹವಾಗುವುದು ಅಗತ್ಯವಾಗಿ ತೋರಿತು.

ಆಗ ಆತ ಆಸ್ಟ್ರಿಯದ ಆರ್ಚ್ ಡಚೆಸ್ ಆಗಿದ್ದ ಮೇರಿಯಾ ಲೂಯಿಸಳಿಗೆ ಬರೆದ:

"ನಿಮ್ಮ ಸೇವೆಮಾಡಲು ನಮಗೆ ಆತುರ. ಇಂತಹ ಕಾರ್ಯವನ್ನು ಕೈಕೊಳ್ಳಲು ಪ್ರೇರೇಪಿಸುವ ನಮ್ಮ ಭಾವನೆಗಳಿಗೆ ನೀವು ಮಾನ್ಯತೆ ಕೊಡುವಿರಾ? ನಿಮ್ಮನ್ನು ಸಂತುಷ್ಟಗೊಳಿಸಲು ನಾವು ಸದಾ ಸಿದ್ಧರು.....ಇದು ನಮ್ಮ ಹೃದಯದ ಮಹದಾಶೆ. ದಯೆ ತೋರುವಿರೆ?"

ಈ ಪತ್ರದಲ್ಲಿ ಹೆಚ್ಚಿನ ಭಾವನೆಗಳ ಸುಳಿದಾಟವಿಲ್ಲ. ಅಂತಹವುಗಳನ್ನು ಕಾಣಲು ನೆಪೋಲಿಯನ್, ಜೊಸೆಫೈನಳಿಗೆ ಬರೆದ ಓಲೆಗಳನ್ನು ಓದಬೇಕು.

ಮಹಾ ಕವಿ ಜಾನ್ ಕೀಟ್ಸ್

ಈತ ತನ್ನ ಪ್ರೇಯಸಿಗೆ ಹೀಗೆ ಬರೆಯುತ್ತಿದ್ದ:

"ನನ್ನ ದೇವರಾಣಿ.....ನಿನ್ನನ್ನು ಹೊರತು ಬೇರೇನನ್ನೂ ನಾನು ಯೋಚಿಸಲಾರೆ....ನೀನಿಲ್ಲದೆ ನಾನು ಜೀವಿಸಲಾರೆ....ಗ್ರಹಸ್ಥಾಶ್ರಮವೆಂದರೆ ನನಗೆ ದಿಗಿಲು....ಆದರೂ ನಿನಗಾಗಿ ನಾನು ಅದನ್ನು ಪ್ರವೇಶಿಸುವೆ....ನನ್ನ ಜೀವಿತದಲ್ಲಿ ನಾನು ಎಣಿಸುತ್ತಿರುವುದು ಇವೆರಡು; ನಿನ್ನ ಸೌಂದರ್ಯ ಮತ್ತು ನನ್ನ ಮರಣ. ಓ!....ಈವೆರಡೂ ಒಮ್ಮೆಲೆ ನನ್ನ ಕರಗತವಾಗುತಿದ್ದರೆ...."

ಇಂತಹ ಹಲವು ಪತ್ರಗಳನ್ನು ಆ ಹಳ್ಳಿಯ ಹುಡುಗಿ ಮಿಸ್ ಫೇನ್ನಿಬ್ರೌನಿಗೆ ಕೀಟ್ಸ್ ಬರೆಯುತ್ತಿದ್ದ. ತನ್ನ ಹಲವು ಅತ್ಯುಚ್ಚ ಕವಿತೆಗಳನ್ನು ಅವಳನ್ನು ನೆನೆದು ಬರೆದ.

ಆದರೆ ಈಟನೆಯ ವಯಸ್ಸಿನಲ್ಲೇ ದಿವಂಗತನಾದ;—ತನ್ನ ಫೇನ್ನಿಯನ್ನು ಕೊನೆ ತನಕ ಸ್ಮರಿಸುತ್ತಾ!

ಪ್ರಖ್ಯಾತ ಬರೆಹಗಾರ

ಎಡ್ಗಾರ್ ಅಲೆನ್ ಪೋ ಬಾಲ್ಯದಿಂದಲೇ ಬಡತನ–ಮರಣಗಳೊಡನೆ ಹೋರಾಡಿದವನು. ಚಿಕ್ಕಂದಿನಲ್ಲೇ ತನ್ನನ್ನು ವರಿಸಿದ್ದವಳು ವ್ಯತಳಾದ ಬಳಿಕ, ಅಂಧಕಾರ ಅವನ ಜೀವಿತವನ್ನು ಕವಿದಿತ್ತು. ನಿರಾಶೆಯಲ್ಲಿ ಆಶೆಯನ್ನು ಹುಡುಕುವುದಕ್ಕಾಗಿ, ಆತ ಮಿಸೆಸ್ ವ್ಹಿಟ್‌ಮೇನಳಿಗೆ ಪ್ರಣಯ ಪತ್ರಗಳನ್ನು ಬರೆಯುತ್ತಿದ್ದ. ಆದರೆ ನಿರಾಶೆಯಲ್ಲೇ ಆತನ ಜೀವನ ಕೊನೆಗೊಂಡಿತು.

ಕೌಂಟ್‌ಲಿಯೋ ಟಾಲ್‌ಸ್ಟಾಯ

ಈತ ತೆನ್ನೊಂದು ಪ್ರಣಯ ಪತ್ರದಲ್ಲಿ ಬರೆದಿರುವನು: "ನಿನ್ನ ಕೈಯನ್ನು ಎದೆಯ ಮೇಲಿರಿಸಿ, ನಿಧಾನವಾಗಿ, ಅವಸರ ಮಾಡದೆ, ನಾನೇನು ಮಾಡಬೇಕೆಂದು ಹೇಳು....

"....ಸ್ಪಷ್ಟವಾಗಿ ಹೇಳು; ನೀನು ನನ್ನವಳಾಗುವೆಯಾ? ದುಡುಕಬೇಡ, ಸುದೀರ್ಘವಾಗಿ ಯೋಚಿಸು. 'ಇಲ್ಲ' ವೆನ್ನುವೆಯಾದರೆ ನಾನು ದುಃಖಿಯಾಗುವೆನು ನಿಜ. ಆದರೂ ಅದಕ್ಕಾಗಿ ಸಿದ್ಧತೆಮಾಡುವೆನು!"

ಟಾಲ್‌ಸ್ಟಾಯ ಮದುವೆಯೇನೋ ಆದ. ಆದರೆ ತನ್ನ ಜೀವಿತದಲ್ಲಿ ತುಂಬಾ ಸಂಕಷ್ಟಗಳನ್ನನುಭವಿಸಿದ.

ಆದಾಯ ವೆಚ್ಚದ ವಿಚಾರ!

ಪ್ರಖ್ಯಾತ ಪ್ರಬಂಧಕಾರ ಲೀ ಹಂಟ್ ತನ್ನ ಪ್ರೇಯಸಿಯೊಡನೆ, ನಿಷ್ಕರ್ಷಿಸಿದುದೇ ಬೇರೆ. ಸಾಲಿಗ ಬಂದು ಬಾಗಿಲು ತಟ್ಟಿದಾಗ, ಹೆದರುವ ಪತ್ನಿ ಅವನಿಗೆ ಬೇಕಾಗಿರಲಿಲ್ಲ. ಸಂತೋಷದಿಂದ, ಪತಿಯ ಮೇಲಿನ ಪ್ರೀತಿಯಿಂದ ನಡುಗುತ್ತ ಸಾಲಿಗನನ್ನು ಬರಗೊಳಿಸುವವಳು ಬೇಕಿದ್ದಳು.

ಮಿಸ್ ಕೆಂಟ್ ಅವನವಳಾದಳು. ಆತನೊಡನೆ ೫೦ ವರುಷಗಳ ದಾಂಪತ್ಯ ಸುಖವನ್ನನುಭವಿಸಿದಳು.

"ಹೇಳು....ನನ್ನ ಕುರಿತು, ನಿನ್ನ ಕುರಿತು, ಪರಿಸ್ಥಿತಿಯ ಕುರಿತು, ಚೆನ್ನಾಗಿ ವಿಚಾರಿಸು. ನಿನ್ನ ವಿಧಿಯ ಮೇಲೆ, ನಿನಗೆ ವಿಶ್ವಾಸವಿದೆಯೆ? ನಾನು ನಿನ್ನನ್ನು ನಂಬುವಂತೆ ನೀನು ಅದೃಷ್ಟವನ್ನು ನಂಬುವೆಯೆ?....ಸಾವಧಾನ....ನಾನು ಸ್ಥಿರಣಿಯಿಲ್ಲದೆ ಕಾದಿರುವೆನು....ಆದರೂ, ನೀನು ವಿಳಂಬಿಸಲಾರೆಯೆಂದು ನನಗೆ ಗೊತ್ತು. ದೇವರು ನಿನಗೆ ಬುದ್ಧಿ ಕೊಡಲಿ....ಇಚ್ಛೆಯಿದ್ದಂತೆ ತೀರ್ಮಾನಿಸು...."

ಇದು ಕಾರ್ಲೈಲ್ ಜೇನ್‌ವೆಲ್ಶಳಿಗೆ ಬರೆದ ಒಂದು ಪತ್ರದ ತುಣುಕು.

ಅವಳು ದಾರಿದ್ರ್ಯಕ್ಕಾಗಿ ಬೆದರಿದಳಾದರೂ, ಅವನ ಸಂಗಾತಿಯಾಗಲು ದೃಢ ನಿಶ್ಚಯ ಮಾಡಿದಳು.

ಜರ್ಮನಿಯ ಕವಿಗಳಾದ ರೋಬರ್ಟ್ಸ್ ಶುಮಾನ್, ಹೀನ್‌ರಿಶ ಹೀನ್ ಮೊದಲಾದವರ ಕುರಿತೂ ಇಂತಹ ಸ್ವಾರಸ್ಯಕರವಾದ ಕಥೆಗಳಿವೆ.

ಎಲ್ಲಕ್ಕಿಂತಲೂ ಮಿಗಿಲಾದ ಅನಶ್ವರವಾಗಿ ಬಾಳುವ ಪ್ರಣಯ ಕಥೆ ರೋಬರ್ಟ್ ಬ್ರೌನಿಂಗಿನದು.

"ದೇವರು ಇಲ್ಲವೆ ನೀನಲ್ಲದೆ, ಬೇರಾರೂ ನನ್ನನಿನ್ನೊಳಗಿನ ಸಂಬಂಧವನ್ನು ಕಡಿಯರು....ನೀನು ನನ್ನನ್ನು ಹೇಗೆ ಬೇಕೋ ಹಾಗೆ ತಿಳಿ. ಮಿತ್ರನೆಂದಾದರೆ ಮಿತ್ರನೆಂದು....ಇಲ್ಲವೆ ಅದಕ್ಕಿಂತ ಹೆಚ್ಚಿನದಿದ್ದರೆ, ಅದು ದೇವರನ್ನೂ ನಿನ್ನನ್ನೂ ಹೊಂದಿಕೊಂಡಿದೆ."

ಎಲಿಜೆಬೆತಳನ್ನು, ಕಾಯಿಲೆ ಬಿದ್ದಿದ್ದಾಗ ಮೊದಲ ಬಾರಿಗೆ ಕಂಡ ಕೆಲವೇ ದಿನಗಳಲ್ಲಿ, ಕವಿ ಈ ಪತ್ರವನ್ನು ಬರೆದು ಆಕೆಗೆ ಸಂಪೂರ್ಣ ಗುಣವಾಗುವುದೆಂದು ಅವನ ದೃಢ ಭರವಸೆ ಹಾಗಿತ್ತು.

ಇಬ್ಬರಲ್ಲಿ ಆವರಿಬ್ಬರೂ ಪರಾರಿಯಾಗಿ, ವಿವಾಹವಾಗಿ, ಒಂದೆಡೆ ಸುಖವಾಗಿ ಬಾಳಿದರು.

ಹಿಟ್ಲರನು ಭಾಷಣ ಮಾಡುವನೇ?

ಹಿಟ್ಲರನು ಸದ್ಯದಲ್ಲೇ ಒಂದು ಭಾರೀ ಭಾಷಣ ಮಾಡುವನೆಂದು ವಿಲ್‌ಹೆಲ್ಮ್ ಸ್ಟ್ರೆಸ್ಸೆಯಲ್ಲಿ, ವಾಡಿಕೆಯಂತೆ, ಲೌಡ್ ಸ್ಪೀಕರುಗಳನ್ನು ಜೋಡಿಸಿ ತಕ್ಕ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಸುದ್ದಿ.

ಜೀರ್ಣೇಂದ್ರಿಯದ ತೊಂದರೆಗಳು ಚೈತನ್ಯವನ್ನು • ಕಡಮೆಗೊಳಿಸುತ್ತವೆ

ಆಹಾರವು ಸರಿಯಾಗಿ ಜೀರ್ಣವಾಗದಿದ್ದಲ್ಲಿ, ನಿಮಗೆ ಅವಶ್ಯಕವಾದ ಶಕ್ತಿಯನ್ನೂ ಚೈತನ್ಯವನ್ನೂ ಅದು ಕೊಡಲಾರದು. ದುರ್ಬಲವಾದ ಜೀರ್ಣಶಕ್ತಿಯ ಚಿಹ್ನೆಗಳೆಂದರೆ ಹುಳಿವಿಕಾರ, ತಲೆವೇದನೆ, ಪಿತ್ತಸಂಕಟ, ವಾಯು ತುಂಬುವಿಕೆ, ಮಲಬದ್ಧತೆ. ಅವು ದುರ್ಬಲ ಜೀರ್ಣಶಕ್ತಿಯ ನಿಜವಾದ ಕಾರಣವನ್ನು ತೋರಿಸುತ್ತವೆ–ನಿಮ್ಮ ಹೊಟ್ಟೆಯಲ್ಲಿ ಅಧಿಕವಾಗಿರುವ ಆಮ್ಲರಸ.

ನಿಮಗೆ ಅವಶ್ಯಕವಾದ ಶಕ್ತಿಯನ್ನೆಲ್ಲಾ ನಿಮ್ಮ ಜೀರ್ಣ ಶಕ್ತಿಯು ನಿಮಗೆ ಒದಗಿಸುತ್ತದೆಂದು ದೃಢಪಡಿಸಲೋಸುಗವಾಗಿ ದುರ್ಬಲ ಜೀರ್ಣಶಕ್ತಿಯ ಪ್ರಥಮ ಚಿಹ್ನೆ ತೋರಿದೊಡನೆಯೇ ಎರಡು ಚಾಚಮ್ಚ ಗಳಷ್ಟು ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಸೇವಿಸಿ. ಯಾ ಎರಡು ಫಿಲ್ಲಿಪ್ಸ್ ಬಿಲ್ಲೆಗಳನ್ನು ಸೇವಿಸಿ. ಬೇಗನೆ ದುರ್ಬಲ ಜೀರ್ಣ ಶಕ್ತಿಯ ಚಿಹ್ನೆಗಳು ಮಾಯವಾಗುತ್ತವೆ. ಏಕೆಂದರೆ, ಫಿಲ್ಲಿಪ್ಸ್ ಅವುಗಳ ಕಾರಣವಾದ–ಹೊಟ್ಟೆಯಲ್ಲಿನ ಅಧಿಕ ಆಮ್ಲರಸವನ್ನು ನಿವಾರಿಸುತ್ತದೆ. ಒಡನೆಯೇ ನಿಮ್ಮ ಹೊಟ್ಟೆಯು ಆಹಾರವನ್ನು ಸಮರ್ಥರೀತಿಯಲ್ಲಿ ಜೀರ್ಣಪಡಿಸುವದೊಡನೆ ನಿಮಗೆ ಯಥೇಷ್ಟ ಶಕ್ತಿಯನ್ನೂ ಚೈತನ್ಯವನ್ನೂ ಒದಗಿಸುತ್ತದೆ.

ಮತ್ತು ಫಿಲ್ಲಿಪ್ಸ್‌ನಲ್ಲಿ ಮೃದುವಾದ ಹಾಗೂ ಪರಿಣಾಮಕಾರಿಯಾದ ಭೇದಿ ಸಾಮರ್ಥ್ಯವಿರುವದರಿಂದಾಗಿ ಅದು ಬೇಗನೇ ನಿಮ್ಮ ಪ್ರಕೃತಿಯಿಂದ ವಿಷಮಯವಾದ, ಶಕ್ತಿ ಕುಂದಿಸುವ ಕಶ್ಮಲ ಪದಾರ್ಥಗಳನ್ನು ಹೊರ ಹಾಕುತ್ತದೆ.

ದ್ರಾವಕರೂಪದಲ್ಲಿ ಮನೆವಾರ್ತೆಯ ಉಪಯೋಗಕ್ಕಾಗಿಯೂ ಯಾ ನಿಮ್ಮ ಜೇಬಿನಲ್ಲಿರಿಸುವದಕ್ಕಾಗಿ ಅನುಕೂಲವಾದ ಬಿಲ್ಲೆಗಳ ರೂಪದಲ್ಲಿಯೂ ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಎಲ್ಲಾ ಒಳ್ಳೇ ಔಷಧ ಶಾಪುಗಳಲ್ಲೂ ದೊಡ್ಡ ಅಂಡಿಗಳಲ್ಲೂ ಸಿಗುತ್ತದೆ. M35v

ಮಿ। ಜಮ್ನಾದಾಸ್ ಮೆಹ್ತಾರವರ ಉಪನ್ಯಾಸ

(ಸ್ವಂತ ಸುದ್ದಿಗಾರರಿಂದ)

'ಬ್ರಿಟನ್ನಿನ ಆವಶ್ಯಕತೆಯು ಭಾರತಕ್ಕೆ ಅವಕಾಶವನ್ನೊದಗಿಸಿರಬಹುದು. ಇದನ್ನು ನಾವು ಉಪಯೋಗಿಸಿಕೊಂಡು ನಮ್ಮ ದೇಶದ ರಕ್ಷಣೆಗೋಸ್ಕರ ಶಸ್ತ್ರ ಸಜ್ಜಿತರಾಗೋಣ" ಎಂದು ರಾಷ್ಟ್ರೀಯ ರಕ್ಷಣಾ ಸಮಿತಿಯ ಸದಸ್ಯರಾದ ಬೊಂಬಯಿಯ ಶ್ರೀ। ಜಮ್ನಾದಾಸ್ ಮೆಹ್ತಾರವರು, ಬೆಂಗಳೂರು ಇಂಟರ್‌ಮೆಡಿಯೇಟ್ ಕಾಲೇಜಿನ ಸಭಾ ಮಂದಿರದಲ್ಲಿ ಭಾರತ ರಕ್ಷಣೆಯ ಸಮಸ್ಯೆಯನ್ನು ಕುರಿತು ಮಾಡಿದ ಭಾಷಣದಲ್ಲಿ ಹೇಳಿದರು. ಮಂತ್ರ ಜಪದಿಂದಾಗಲೀ, ನೂಲುವುದರಿಂದಾಗಲೀ, ಅಹಿಂಸೆಯ ತತ್ವಾನುಸರಣೆಯಿಂದಾಗಲೀ, ಭಾರತವು ಶಸ್ತ್ರದ ಮುಂದೆ ನಿಂತು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅವರು ಒತ್ತಿ ಹೇಳಿದರು.

ಕಾಲೇಜ್ ಸಂಘದ ಅಧ್ಯಕ್ಷರಾದ ಶ್ರೀ। ಬಿ. ಎನ್. ನಂಜುಂಡಯ್ಯರವರು ಉಪನ್ಯಾಸಕರನ್ನು ಸ್ವಾಗ

ಇರಾನಿನ ವೈಮಾನಿಕ ಚಲಿಪ

ಬ್ರಿಟಿಷ್ ವಾಯುಸೇನವರ ಮುನ್ನಡೆಯನ್ನು ತಡೆದೆ ಬಿಟ್ಟರೆಂದು ಅತ್ಯುತ್ಸಾಹಿಗಳಾದ ಕೆಲವು ಮಂದಿ ಯುವಕರಾದ ಇರಾನೀ ವಿಮಾನಿಕರು ತೆಹರಾನಿನಲ್ಲಿ ಕೆಲವು ಕಡೆ ಬಾಂಬು ಹಾರಿಸಿದರು; ಇದು ಜರ್ಮನಿಯವರ ಪ್ರೇರೇಪಣೆಯಿಂದಾಗಿರಬಹುದು. ಹೇಗೂ ಆ ವೈಮಾನಿಕರೀಗ ಹೇಳದೆ ಕೇಳದೆ, ಎಲ್ಲಿಗೋ ಏನೋ ಓಡಿಬಿಟ್ಟಿದ್ದಾರೆಂದು ಸದ್ಯದ ವಾರ್ತೆ.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'



ಎಲ್ಲಾ ಅಂಗಡಿಗಳಲ್ಲೂ ಮತ್ತು ಸ್ಟೋರುಗಳಲ್ಲೂ ಮಾರಲ್ಪಡುತ್ತದೆ.

ಡಿಸ್ಟ್ರಿಬ್ಯೂಟರ್ಸ್:

ಕ್ಹಿವ್ಸ್ ಟ್ರೇಡಿಂಗ್ ಕಂ. (ಇಂಡಿಯ) ಲಿ.,

ಫ್‌ನೆಸ್ ಹಾಲ್, 310–311, ಲಿಂಗಚೆಟ್ಟಿ ಸ್ಟ್ರೀಟ್,

ಮದರಾಸ್.

ಕಲ್ಕತ್ತ, ಕರಾಚಿ ಮತ್ತು ರಂಗೂನಿನಲ್ಲೂ ಸಹ.

ಆರೋಗ್ಯದಿಂದಿರುವ ಸಂಸಾರವೇ ಆನಂದಕರವಾದ ಸಂಸಾರ

ಎಲ್ಲೆಲ್ಲೂ ಸಾವಿರಾರು ಜನರು ಅನುಸರಿಸುತ್ತಿರುವ ಮಾದರಿಯನ್ನೇ ನೀವೂ ಅನುಸರಿಸಿ ನಿಮ್ಮ ಸಂಸಾರದಲ್ಲಿ ಪ್ರತಿಯೊಬ್ಬರಿಗೂ ತಪ್ಪದೆ "ಓವಲ್‌ಟಿನ್" ಕೊಡಿ. ರುಚಿಕರವಾದ ಈ ಪಾನೀಯದಲ್ಲಿ ದೇಹಪೋಷಣೆಯ ವಸ್ತುಗಳು ಹೇರಳವಾಗಿವೆ ಮತ್ತು ಆರೋಗ್ಯವನ್ನೂ, ಶಕ್ತಿಯನ್ನೂ, ವೀರ್ಯವನ್ನೂ ವೃದ್ಧಿಮಾಡುತ್ತವೆ.

ಇದರ ಮೋಹಕರವಾದ ವಾಸನೆಯು ಮಕ್ಕಳಿಗೂ ವಯಸ್ಕರಿಗೂ ಆನಂದವನ್ನುಂಟುಮಾಡುತ್ತದೆ. "ಓವಲ್‌ಟಿನ್"ನ ಪ್ರತಿಯೊಂದು ತೊಟ್ಟಿನಲ್ಲೂ ಪ್ರಕೃತಿಯ ಪುಷ್ಟಿಕೊಡುವ ಪದಾರ್ಥಗಳು ತುಂಬಿರುತ್ತವೆ. ಇವು ದೇಹವನ್ನೂ ಮೆದುಳನ್ನೂ ನರಗಳನ್ನೂ ಜಟುವಟಿಕೆಯಿಂದಲೂ ಆರೋಗ್ಯವಾಗಿಯೂ ಇಡುತ್ತವೆ. ನಿಮ್ಮ ಪ್ರೀತಿಪಾತ್ರರಾದವರ ಸುಖವು ಅವರ ಆರೋಗ್ಯದ ಆಧಾರದ ಮೇಲಿದೆಯೆಂಬುದನ್ನು ನೆನಪಿನಲ್ಲಿಡಿ.

"ಓವಲ್‌ಟಿನ್" ಪ್ರಕೃತಿಲಭ್ಯವಾದ ಸರ್ವೋತ್ಕೃಷ್ಟವಾದ ಶಕ್ತಿವರ್ಧಕ ಆಹಾರಗಳಾದ– ಪಕ್ವವಾದ ಗೋಧಿ ಸಾರ, ಹಸುವಿನ ಹೊಸದಾದ ಕೆನೆಹಾಲು, ಅಮೂಲ್ಯವಾದ ಸ್ವಾಭಾವಿಕ ವಿಟಮಿನ್‌ಗಳು ಮತ್ತು ಇತರ ಆಹಾರಪದಾರ್ಥಗಳಿಂದ ತಯಾರಾಗಿದೆ. ನಕಲು ಮಾಲುಗಳನ್ನು ತ್ಯಜಿಸಿ "ಓವಲ್‌ಟಿನ್"ನ್ನೇ ಕೇಳಿ.

"ಓವೆಲ್‌ಟಿನ್" ರುಚಿಕರವಾದ ಹಾಗೂ ಪುಷ್ಟಿದಾಯಕ ಆಹಾರಪಾನೀಯ. ಇದನ್ನು ಬಿಸಿಬಿಸಿಯಾಗಿ ಅಥವಾ ತಣ್ಣಗೆ ಸೇವಿಸಬಹುದು. ಅಲ್ಲದೆ ಇದನ್ನು ತಯಾರಿಸುವುದು ಬಹಳ ಸುಲಭ ಮತ್ತು ಪ್ರತಿಯೊಂದು ಡಬ್ಬದ ಜೊತೆಯಲ್ಲಿಯೂ ತಯಾರಿಸುವ ಕ್ರಮ ತಿಳಿಸಿದೆ.

"ಓವಲ್‌ಟಿನ್" ಬಿಸ್ಕತ್ತುಗಳು— ರುಚಿಕರವಾದವು, ಜೀರ್ಣಶಕ್ತಿಯುಳ್ಳವು ಮತ್ತು ಪುಷ್ಟಿದಾಯಕವಾದವು. ನೀವು ಕೊಳ್ಳಲು "ಓವಲ್‌ಟಿನ್" ಬಿಸ್ಕತ್ತುಗಳೇ ಶ್ರೇಷ್ಠವಾದವು. ಇವುಗಳಲ್ಲಿ "ಓವಲ್‌ಟಿನ್" ಸೇರಿರುವುದು ಹೆಚ್ಚು ವಿಶೇಷ. ಇವು 4 ಮತ್ತು 8 ಔನ್ಸ್ ಪೊಟ್ಟಣಗಳಲ್ಲೂ 1 ಪೌಂಡ್ ಡಬ್ಬಗಳಲ್ಲೂ ಮಾರಲ್ಪಡುತ್ತೆ.

'OV/61/40

ಘೂಚಾದ ಆಕ್ರಮಣ

ಫೊಕೇನ್ ಪ್ರಾಂತದ ರಾಜಧಾನಿಯಾದ ಘೂಚಾವನ್ನು–ಇದು ಹಲವು ವರ್ಷಗಳಿಂದ ಜಪಾನೀಯರ ವಾಣಿಜ್ಯ ಮತ್ತು ಮಿಲಿಟರಿಯ ಕಾರ್ಯಭಾರಗಳ ಕೇಂದ್ರವಾಗಿತ್ತು–ಚೀನೀ ಸೇನೆಗಳೀಗ ಸಂಪೂರ್ಣವಾಗಿ ಆಕ್ರಮಿಸಿದ್ದಾವೆ. ಜಪಾನೀಯರು ಅಲ್ಲಿಂದ ಹಿಂದೆಗೆದರು ಎಂದು ಹೇಳಲಾಗಿದೆ. ಇದರ ನಿಜವಾದ ಕಾರಣ ತಿಳಿದಿಲ್ಲ. "ಜಪಾನರ ಸುಸಂಘಟಿತವಾದ ಕ್ರಮಗಳನ್ನು ಘೂಚಾದ ಚೀನೀ ನಾಗರಿಕರು ತಾವೇ ಅನುಷ್ಠಾನದಲ್ಲಿ ತಂದುಕೊಳ್ಳಲು ಸಮರ್ಥರೆಂದು ಜಪಾನೀಯರಿಗೆ ಖಚಿತವಾದುದರಿಂದ ಜಪಾನೀಯರಿಗೆ ಅಲ್ಲಿ ಇನ್ನೂ ಇರಬೇಕಾದ ಆವಶ್ಯಕತೆ ತೋರದೆ, ಹಿಂದೆಗೆಯಲಾಗಿದೆ" ಎಂದು ಜಪಾನೀ ಪತ್ರಿಕೆಗಳ ಹೆಗ್ಗಳಿಕೆಯ ಮಾತು.

ನಾವು

501

ಸ್ಪೆಶಲ್ ಸಾಬೂನು
ಉಪಯೋಗಿಸಲು

೩ ಕಾರಣಗಳು

೫೦೧ ಸ್ಪೆಶಲ್ ಸಾಬೂನು ಬಟ್ಟೆಗಳ ಮಲಿನತೆಯನ್ನು ಜಾಗ್ರತೆಯಾಗಿಯೂ ಸಂಪೂರ್ಣವಾಗಿಯೂ ನಿರ್ಮೂಲ ಮಾಡುತ್ತದೆ.

೫೦೧ ಸ್ಪೆಶಲ್ ಸಾಬೂನು ಕಾರ್ಯದಲ್ಲಿ ಹಾನಿಕರವಾದದ್ದಲ್ಲ. ನಾಜೂಕಾದ ಬಟ್ಟೆಗಳು ಅದರ ವಿಪುಲ ನೊರೆಯಲ್ಲಿ ಸುರಕ್ಷಿತವಾಗಿರುವುವು.

೫೦೧ ಸ್ಪೆಶಲ್ ಸಾಬೂನು ಮಲಿನತೆಯನ್ನು ಜಾಗ್ರತೆಯಾಗಿ ನಿರ್ಮೂಲ ಮಾಡುವುದರಿಂದ ಮನೆಯಲ್ಲಿ ಬಟ್ಟೆಗಳನ್ನು ಒಗೆಯುವುದು ಅತಿ ಸುಲಭ.

೫೦೧ ಸ್ಪೆಶಲ್ ಸಾಬೂನು ಜೊತೆಗೆ ಖ್ಯಾತಿಪಡೆದ ೫೦೧ ಒಗೆಯುವ ಸಾಬೂನು ಉಂಟು. ಇದರ ಬೆಲೆ ಕಡಿಮೆ. ಗೃಹಕೃತ್ಯಕ್ಕೆ ಸರಾಗವಾದ ಸಾಬೂನು. ೫೦೧ ಒಗೆಯುವ ಸಾಬೂನು ಘನಾಕೃತಿ, ಬಾರುಗಳು, ಬಿಲ್ಲೆಗಳ ಮತ್ತು ಚೂರುಗಳ ರೂಪಾಂತರಗಳಲ್ಲಿಎಲ್ಲಾ ಅಂಗಡಿಗಳಲ್ಲೂ ದೊರಕುವುದು.

೫೦೧ ಸ್ಪೆಶಲ್ ಸಾಬೂನು ಪ್ಯಾಕೆಟ್ಟುಗಳು ೩ ಸೈಜುಗಳಲ್ಲಿ ದೊರಕುತ್ತದೆ.

ಪ್ರಾಣಿಗಳ ಕೊಬ್ಬು ಮಿಶ್ರಿತವಾಗಿಲ್ಲ.

ಟಾಂಕೊ ಸೇಲ್ಸ್ ಡಿಪಾರ್ಟ್‌ಮೆಂಟ್.
2 A, ಸೌತ್ ಪೆರೆಡ್, ಬೆಂಗಳೂರು.

ದಿ ತಾತಾ ಆಯಿಲ್ ಮಿಲ್ಸ್ ಕಂ. ಲಿ.
ತಾತಾಪುರಂ ಮತ್ತು ಬೊಂಬಯಿ.

Announcement

DONATIONS & CONTRIBUTIONS
ARE RECEIVED FOR CREDIT OF ACCOUNT OF
THE
Mahajana Flood Relief Committee
OF SOUTH KANARA
At all our Branches——Free of all Charges

THE CANARA BANKING CORPORATION, LTD.
(Incorporated in British India)
ESTD: 1906

ಕಂಠೀರವ
KANTEERAVA
KANARESE, BI-WEEKLY

ಅಜ್ಞಾನದಿಂದ ಜ್ಞಾನವು ಆವರಿಸಲ್ಪಟ್ಟಿದೆ. ಆದ್ದರಿಂದಲೇ ಮೋಹದ ಭ್ರಾಂತಿಯ ಮುಸುಕು. —**ಸೂಕ್ತಿಮಾಲೆ.**

XXIII] ಮಂಗಳೂರು, ತಾರೀಕು ೯—೯—೧೯೪೧ **[೪೭**
೧೮೬೩ ವೃಷ ಸಂವತ್ಸರದ ಭಾದ್ರಪದ ಬ| ೪ ಮಂಗಳವಾರ

ರಷ್ಯಾ-ರಣರಂಗದ ಪ್ರಚಲಿತ ವಿದ್ಯಮಾನಗಳು

ಲೆನೆನ್‌ಗ್ರಾಡಿನ ಮುತ್ತಿಗೆಯೊಂದು ಸದ್ಯದ ಪ್ರಾಮುಖ್ಯ ವಿಚಾರವಾಗಿದೆ. ಜರ್ಮನರೇನೋ ಆ ನಗರದ ಮುತ್ತಿಗೆಯ ಕೆಲಸವು ಮುಂಬರಿಯುತ್ತಿದೆ ಎಂದೂ, ಜರ್ಮನ್ ಸೇನೆಗಳು ಆಗಲೇ ಆ ನಗರದ ಮೇಲೆ ಫಿರಂಗಿಗಳನ್ನು ಹಾರಿಸಲಾರಂಭಿಸಿರುವವೆಂದೂ ಅನ್ನುತ್ತಿರುವರಾದರೂ, ವಿದ್ಯಮಾನಗಳು ರಷ್ಯದವರನ್ನು ಕಂಗೆಡಿಸುವುದಾಗಿಲ್ಲವೆಂದು ತಿಳಿದು ಬರುತ್ತಿದೆ. ಲೆನೆನ್‌ಗ್ರಾಡಿನ ರಕ್ಷಣಾಕಾರ್ಯಗಳು, ಕೀವ್ ಮತ್ತು ಒಡೆಸಗಳಂತೆ ಬಹಳ ಬಲವಾಗಿದ್ದು, ಜರ್ಮನರು ಅಲ್ಲಿ ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳಬೇಕಾದರೆ ಕೂಡ, ಹೊಸ ಜರ್ಮನ್ ಸೇನೆಗಳನ್ನೇ ತಂದು ಅಲ್ಲಿ ತುಂಬಿಸದೆ ನಿರ್ವಾಹವೇ ಇಲ್ಲವಾಗಿದೆ. ಈ ಕಾರಣದಿಂದಲೂ, ಇತರ ಮಿಲಿಟರಿಯ ಕಾರಣದಿಂದಲೂ ಲೆನೆನ್‌ಗ್ರಾಡ್‌ನ್ನು, ನಿರೀಕ್ಷಿಸಿದ ಸಮಯದೊಳಗೇ ಜರ್ಮನರು ಹಿಡಿಯಬಲ್ಲರೆಂದು ಭಾವಿಸಲು ಅವಕಾಶವಿಲ್ಲ.

ಲೆನೆನ್‌ಗ್ರಾಡ್ ರಷ್ಯದ ಒಂದು ಪ್ರಧಾನ ಸ್ಥಾನ. ಅದರ ಪತನದಿಂದ ರಷ್ಯದ ದೊಡ್ಡ ನೌಕಾನಿರ್ಮಾಣವಾದ ಕ್ರಾನ್‌ಸ್ಟೆಡ್ ರಷ್ಯದ ಕೈ ತಪ್ಪುವಂತಾಗಿ, ರಷ್ಯದ ಬಾಲ್ಟಿಕ್ ನೌಕಾಪಡೆ ಅಲ್ಲಿಂದ ತಪ್ಪಿಸಿಕೊಳ್ಳುವುದು ಪ್ರಯಾಸಕ್ಕಿಡುವುದು. ಇಷ್ಟೇ ಅಲ್ಲದೆ, ಇದರಿಂದ ಸಮುದ್ರದ ಅಧಿಕಾರ ಪಡೆದ ಹಿಟ್ಲರ್, ತನ್ನ ಸೇನೆಗಳನ್ನು ಬಾಲ್ಟಿಕಿನ ಮೂಲಕ ಸಾಗಿಸಿ, ಮಾಸ್ಕೊವಿನ ಹಲ್ಲೆಗೂ ಯತ್ನಿಸಬಹುದಾಗಿದೆ.

ಲೆನೆನ್‌ಗ್ರಾಡ್ ಉತ್ಕೃಷ್ಟವಾದ ಉಕ್ಕಿನ ಕಾರ್ಖಾನೆಗಳ ಹಾಗೂ ವಿಮಾನ ನಿರ್ಮಾಣದ ಒಂದು ಕೈಗಾರಿಕೆಯ ಕೇಂದ್ರವಾಗಿದ್ದು, ಅದು ರಷ್ಯದ ಒಂದು ದೊಡ್ಡ ಸರಬರಾಯಿ ಕ್ಷೇತ್ರವಾಗಿದೆ. ಆದುದರಿಂದ ಅದು ಕೈತಪ್ಪುವಲ್ಲಿ, ರಷ್ಯದ ಸರಬರಾಯಿಯ ಕೈಕಟ್ಟುವುದಲ್ಲದೆ, ಆರ್ಕ್‌ಟಿಕ್ ಸಮುದ್ರದ ಹಿಮರಹಿತವಾದ ದುರ್ಗಪ್ರದೇಶವೂ, ನೌಕಾಕ್ಷೇತ್ರವೂ ಆಗಿರುವ ಮರ್‌ಮನಸ್ಕದ ಸಂಬಂಧದಿಂದ ರಷ್ಯದವರು ಕತ್ತರಿಸಲ್ಪಡುವಂತೆಯೂ ಆಗುತ್ತಿದೆ.

ಕೇಂದ್ರ ರಣರಂಗದಲ್ಲಿ, ಜರ್ಮನರ ನಿಲುಗಡೆ ತಮ್ಮ ರಕ್ಷಣೆಯದಷ್ಟೇ ಎಂಬಂತೆ ತೋರುತ್ತಿದೆ. ಗೋಮೆಲ್ ಕ್ಷೇತ್ರದಲ್ಲಿ, ಫಿನ್ನರೆನ್ನುವಂತೆ ನಡೆದ ಹಾಗಿಲ್ಲ; ಬ್ರಯಾನಸ್ಕನ್ನು ಜರ್ಮನರು ಇನ್ನೂ ಹಿಡಿದಿಲ್ಲ. ಅವರು ಅಲ್ಲಿ ರೈಲ್ವೆಗಳನ್ನು ಪುಡಿಮಾಡಲು ಯತ್ನಿಸುತ್ತಿದ್ದಾರೆಂಬ ಮಾತು ಮಾತ್ರ ನಿಜ.

ಇನ್ನು ೧೦ ಲಕ್ಷ ವೀರ ರಷ್ಯದವರಿಂದ ಕಾಪಾಡಲ್ಪಡುತ್ತಿರುವ ಲೆನೆನ್‌ಗ್ರಾಡಿನ ಮಾತಂತಿರಲಿ; ನೀಪಿಯರ್ ನದಿಯನ್ನು ದಾಟಲು, ಜರ್ಮನರು ಮಾಡಿರುವ ಇದುವರೆಗಿನ ಪ್ರತಿಯೊಂದು ಪ್ರಯತ್ನವೂ ವ್ಯರ್ಥವಾಗಿದೆ. ಒಂದು ವೇಳೆ, ಅವರು ಅದನ್ನು ದಾಟುವಲ್ಲಿ ಕೃತಕಾರ್ಯರಾಗುವುದಾದರೆ, ಆಗ ರಷ್ಯದ ಕೈಗಾರಿಕೆಯ ಕೇಂದ್ರವಾದ ಖಾರಕೋವಿಗೂ, ಕಾಕನಿಸ್ಸಿನ ರೈಲ್ವೆಗಳಿಗೂ ಅಪಾಯದ ಭೀತಿ ತಟ್ಟುವಂತಾಗುವುದು. ಹೇಗೂ ರಷ್ಯದವರು, ಇಂದಿನ ವರೆಗೆ ಅಂತಹ ಪರಿಸ್ಥಿತಿಯೊದಗದಂತೆ, ಜರ್ಮನರನು ತಡೆಯುವ ಅಮಿತ ಶೌರ್ಯವನು ಪ್ರದರ್ಶಿಸಿದಾರೆ.

ಜಪಾನರ ಯುದ್ಧ ಸಾಮಗ್ರಿಗಳ ಸಂಗ್ರಹ

ಜಪಾನಿನ ನೌಕಾಬಲಕ್ಕೂ, ಸೇನಾಬಲಕ್ಕೂ ಅಗತ್ಯವಿರುವ ಆಯುಧಗಳು, ಮದ್ದುಗುಂಡುಗಳು, ಹಸೀ ಪದಾರ್ಥಗಳೇ ಮೊದಲಾದ ಮಿಲಿಟರಿ ಸೋಬಸ್ಕ್ರಗಳೆಲ್ಲ ಧಾರಾಳ ಪ್ರಮಾಣದಲ್ಲಿ ಜಪಾನ್, ಕೊರಿಯ, ಮಂಚೂರಿಯಾ ಮತ್ತು ವಶಪಡಿಸಿಕೊಂಡ ಚೀನಾ ಪ್ರದೇಶಗಳಲ್ಲಿ ಸಂಗ್ರಹಿಸಿಡಲಾಗಿದೆ; ಇವುಗಳಲ್ಲಿ ಕಬ್ಬಿಣದ ಅದುರು, ಕಬ್ಬಿಣ, ಉಕ್ಕು, ಕಲ್ಲಿದ್ದಲು, ಸೌದೆಯೆಣ್ಣೆ, ರಬ್ಬರು, ಅಕ್ಕಿ, ಬಟ್ಟೆ, ಚರ್ಮ ಮೊದಲಾದುವು ಯಥೇಷ್ಟವಿದೆ; ಈ ಸರಬರಾಯಿಯ ಬಲದಿಂದ ಜಪಾನು, ಚೀನದೊಡನೆ ಯುದ್ಧ ಮುಂದುವರಿಸುತ್ತ, ಬ್ರಿಟಿಷ್-ಅಮೆರಿಕಗಳ ವ್ಯಾಪಾರ ಬಹಿಷ್ಕಾರವು ಜಪಾನಿನ ಮೇಲಿದ್ದರೂ, ದಕ್ಷಿಣದ ಮಿಂಚಿನ ವೇಗದ ಯುದ್ಧವನ್ನೂ ಆರು ತಿಂಗಳ ಮಟ್ಟಿಗಾದರೂ ನಡೆಸಲು ಸಮರ್ಥವಾಗಿದೆ ಎಂದು ತಿಳಿದುಬಂದಿದೆ.

ಶತ್ರು ಹಡಗುಗಳಿಗೆ ಘಾತ

ಕಳೆದ ಸೆಪ್ಟೆಂಬರ ತಾ. ೩ರಲ್ಲಿ ಟ್ರಿವೋಲಿ ಬಂದರದ ಹೊರ ವಲಯದಲ್ಲಿ ಬ್ರಿಟಿಷ್ ವಿಮಾನಗಳು ಶತ್ರುವಿನ ಒಂದು ಡಿಸ್ಟ್ರಾಯರನ್ನು ನಾಶಮಾಡಿದಂತೆ ತಿಳಿದುಬಂದಿದೆ. ಇಟೆಲಿ ಕರಾವಳಿಯಿಂದ ಕೊಂಚ ದೂರದಲ್ಲಿ "ಡುಯಿಲ್ಲೋ" ಎಂಬ ೩೫,೬೩೬ ಟನ್ನುಗಳ ಒಂದು ಇಟೆಲಿಯ ದೊಡ್ಡ ಹಡಗವನ್ನು, ಬ್ರಿಟಿಷ್ ಸಬ್ ಮೆರೈನ್, ಟಾರ್ಪಿಡೋ ಮಾಡಿ ಮುಳುಗಿಸಿದೆ ಎಂದೂ ಹೇಳಲಾಗಿದೆ. ಇಷ್ಟೇ ಅಲ್ಲದೆ "ಎಕ್ವಿಟಾನಿಯಾ" ಎಂಬ ಇಟೆಲಿಯ ೪೫,೬೩೬ ಟನ್ ಭಾರದ ಒಂದು ಸರಬರಾಯಿ ಹಡಗೂ ಮುಳುಗಿಸಲ್ಪಟ್ಟ ವಾರ್ತೆ ಬಂದಿದೆ.

ಕ್ರಿಮಿಯದ ವಿರುದ್ಧ ಸಂಯುಕ್ತ ಕಾರ್ಯಕ್ರಮವೇ?

ನಾಜಿಗಳೂ, ಬ್ಲಶ್ಚೇರಿಯದವರೂ ಜತೆಗೂಡಿ, ನೆಲ, ಜಲ, ವಿಮಾನಯುದ್ಧಗಳನ್ನು ಒಡೆಸದ ಅಥವಾ ಕ್ರಿಮಿಯದ ಮೇಲೆ ನಡೆಸಬಹುದೆಂದು ವದಂತಿ ಹರಡಿದೆ. ಬಲ್ಶೇರಿಯದಲ್ಲಿ ದೊಡ್ಡ ಸಂಖ್ಯೆಯ ಜರ್ಮನ ದಳಗಳು ಬಂದು ತುಂಬಿಕೊಂಡಿರುವುದೂ, ಕಪ್ಪುಸಮುದ್ರದ ಬಂದರುಗಳಾದ ವರ್ನಾ ಮತ್ತು ಬುರ್ಗಾಸಿನಲ್ಲಿ ಹಡಗುಗಳು ಕೇಂದ್ರೀಕರಿಸಿರುವುದೂ ಆ ವದಂತಿಯನ್ನು ಬಲಪಡಿಸುತ್ತಿವೆ. ಹೇಗೂ [illegible]ರಿಯದವರು ರಷ್ಯದವರ ವಿರುದ್ಧ [illegible]ಕಟ್ಟುವುದಿಲ್ಲವೆಂದು ಸಾರಲಾ[illegible]ರ್ತೆಯ ನಿಜಾಂಶ ತಿಳಿಯಲು [illegible] ಕಾಲ ಬೇಕಾಗದೆನ್ನುವ

ಪ್ಯಾರಿಸಿನಲ್ಲಿ ಪುನಃ ಗುಂಡು!

ಮಾಜಿ ಕಮ್ಯುನಿಸ್ಟ್ ಡೆಪ್ಯುಟಿಯಾದ [illegible]. ಮಾರ್ಶಲ್ ಗಿಟನ್ ಎಂಬಾತನಿಗೆ ಒಬ್ಬ ಕೊಲೆಪಾತಕನು ಪ್ಯಾರಿಸಿನಲ್ಲಿ ಗುಂಡು ಹಾರಿಸಿ ಆತನು ಆಸ್ಪತ್ರೆಯಲ್ಲಿ ಮೃತನಾದನು. ಎಂ. ಲಾವಲ್, ಎಂ. ಡಿಟ್‌ರವರು ಆರೋಗ್ಯ [illegible]ದ್ದುಪಡಿದಾರೆ

ವಿದೇಶ—ಹಿಂದೂದೇಶ

ಇರಾನಿನ ವಿದ್ಯಮಾನಗಳು

ಇರಾನಿನಲ್ಲಿ ಈಗ ಶಾಂತಿ ನೆಲಸುತ್ತಾ ಬಂದಿದೆ. ಕೆರ್ಮನ್‌ಷಹ ಕ್ಷೇತ್ರದಲ್ಲಿ ದಂಗೆಗಾರರಾದ ಕೆಲವು ಆಫೀಸರರಿಂದ ನಡೆಸಲ್ಪಟ್ಟಿದ್ದ ಸಿಪಾಯಿಗಳ ತಂಡಗಳನ್ನು ಚದ್ದಿಸಲಾಗಿದೆ. ಅಲ್ಲಲ್ಲಿ ಹಳ್ಳಿಯವರಲ್ಲಿಯೂ ಇತರರಲ್ಲಿಯೂ ಇದ್ದ ರೈಫಲ್‌ಗಳು, ಯಾಂತ್ರಿಕ ಕೋವಿಗಳನ್ನು ಸಂಗ್ರಹಿಸಲಾಗಿದೆ. ೮ ಹಡಗುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದು ಅದೀಗ ಚಲನೆಗೆ ಸಿದ್ಧವಾಗುತ್ತಿವೆ. ಇರಾನಿನ ಜನರಿಗೂ ಬ್ರಿಟಿಷ್ ಸೋಲ್ಜರರಿಗೂ ಸ್ನೇಹ ಸಂಬಂಧವು ಬೆಳೆಯುತ್ತಿದೆ. ಅಲ್ಲಿನ ಆಹಾರ ಸಾಮಗ್ರಿಗಳ ಅಭಾವದ ದೆಸೆಯಿಂದ ಇಂಡಿಯದಿಂದ ೫೫ ಸಾವಿರ ಟನ್ ಗೋಧಿ ಸಕ್ಕರೆ ಟೀ ಅತ್ತ ಸಾಗೆಲು ಏರ್ಪಾಡಾಗಿದೆ.

ರಷ್ಯ-ಬಲ್ಗೇರಿಯ

ಬಲ್ಗೇರಿಯದವರು ರಷ್ಯದ ಹೊರತಾಗಿ ಇತರ ರಣರಂಗಗಳಲ್ಲಿ ಜರ್ಮನರೊಡನೆ ಕಾದಾಡುವೆವೆಂದಿದ್ದಾರೆ. ಇಷ್ಟರವರೆಗೆ, ಬಲ್ಗೇರಿಯವು ಉಕ್ರೈನಿನಲ್ಲಿ ರಷ್ಯದವರಿಂದ ಹಾಳು ಮಾಡಲಾಗದ ಬೆಳೆಯನ್ನು ಕೊಯ್ಯುವಲ್ಲಿ ಸಹಾಯ ಮಾಡಲು ತನ್ನ ೫೫ ಸಾವಿರ ಮಂದಿಯನ್ನು ಕಳಿಸುವೆನೆಂದು ಮಾತ್ರ ಮಾತು ಕೊಟ್ಟಿತ್ತು. ಈಗ ಬಲ್ಗೇರಿಯವು ರಷ್ಯದ ವಿರುದ್ಧ ತಾನು ಕಾದಾಡುವುದಿಲ್ಲವೆಂದಿದೆ. ರಷ್ಯ-ಬಲ್ಗೇರಿಯಗಳ ಇದುವರೆಗಿನ ಸಖ್ಯ ಭಾವವು ಬಲ್ಗೇರಿಯದ ಈ ಕಾರ್ಯನೀತಿಗೆ ಕಾರಣ.

ಪೋಲೆಂಡಿಗೆ ಅಮೆರಿಕದ ಸಹಾಯ

ಪೋಲೆಂಡಿನ ಸೇನೆಗಳಿಗೆ ಅಗತ್ಯವಿರುವ ಯಾವತ್ತು ಯುದ್ಧ ಸಾಮಗ್ರಿಗಳನ್ನು ಅಮೆರಿಕವು ಕೊಟ್ಟು ಸಹಾಯ ಮಾಡಬೇಕೆಂದು ಪ್ರೆಸಿಡೆಂಟ್ ರೂಜ್‌ವೆಲ್ಟರು ಆಜ್ಞೆ ಮಾಡಿದ್ದಾರೆ.

ಬ್ರೆನೆಸ್ಕುನ್ನು ಜರ್ಮನರು ಹಿಡಿದಿಲ್ಲ

ಬ್ರೆನೆಸ್ಕುನ್ನು ಜರ್ಮನರು ಹಿಡಿದಿಲ್ಲ, ಲೆನೆನ್‌ಗ್ರಾಡಿನ ಕಡೆಯ ಜರ್ಮನರ ಮುನ್ನಡೆಯನ್ನು ತಡೆಯಲಾಗಿದೆ ಬಾಲ್ಟಿಕಿನಲ್ಲಿ ಜರ್ಮನರು ರಷ್ಯದವರ ಯಾವ ಹಡಗುಗಳನ್ನೂ ಮುಳುಗಿಸಿಲ್ಲ. ಎಂದು ರಷ್ಯದವರ ಹೇಳಿಕೆ. ಸದ್ಯ ಮಾಸ್ಕೋ ನಗರ ಚಳಿಗಾಲಕ್ಕೆ ಬೇಕಾದ ೪ ಲಕ್ಷ ಟನ್ ಬಟಾಟೆ ಮತ್ತು ೫೧೪೦೦೦ ಟನ್ ಇತರ ತರಕಾರಿಗಳನ್ನಾಗಲೇ ಸಂಗ್ರಹಿಸಿಟ್ಟಿದೆ.

ಹಿಟ್ಲರನ ಭಾಷಣದ ಅವಧಿ ಮುಂದುವರಿಯಿತು

ಹಿಟ್ಲರನ ಭಾಷಣದ ಅವಧಿ ಇದೇ ಸೆಪ್ಟೆಂಬರ ಅಂತ್ಯದ ವರೆಗೆ ಮುಂದುವರಿದಿದೆ. ಅಲ್ಲಿಯ ಪೂರ್ವ ರಣರಂಗದ ಪರಿಸ್ಥಿತಿ ಸ್ಪಷ್ಟವಾಗುವುದೆಂದು ನಿರೀಕ್ಷಿಸಲಾಗಿದೆ.

EARN Rs. 50/- PER MONTH

Without investment or security. Wanted energetic candidates to represent for securing orders of High Class Art Calendars. Ask for our illustrated Free Booklet.

Glasgow Printing Co. Howrah.

ರಷ್ಯಾ—ಜರ್ಮನಿಯ ರಣಾಂಗಣಗಳು

ಜರ್ಮನ್ ಸೇನೆಗಳು ಲೆನೆನ್‌ಗ್ರಾಡಿನ ೧೨ ಮೈಲುಗಳ ಸಮೀಪಕ್ಕೆ ಬಂದಿವೆ ಎಂದು ವಾರ್ತೆ; ಜರ್ಮನರು ಬೇಗನೇ ಡಾಂಟೆಯ ಕೈಗಾರಿಕೆಯ ಕ್ಷೇತ್ರದ ಮೇಲೂ ದೊಡ್ಡ ದಾಳಿ ನಡೆಸುವ ವಿಚಾರದಲ್ಲಿದ್ದಾರಂತೆ; ಫಿನ್ನರ ದಳಗಳು ಮರಮನ್‌ಸ್ಕ್-ಲೆನೆನ್‌ಗ್ರಾಡ್ ರೈಲ್ವೆಯ ಮೇಲೆ ತಮ್ಮ ಆಕ್ರಮಣದ ಭರವಸ್ಸು ಹೆಚ್ಚಿಸಿವೆ; ಕೀವಿನ ನೆಗರದ ಹೊರಗಡೆ ಘೋರ ಕಾಳಗ ನಡೆಯುತ್ತಿದೆ; ಮಧ್ಯ ರಣರಂಗದಲ್ಲಿ ರಷ್ಯದವರ ಪ್ರತಿ ಆಕ್ರಮಣಗಳು ಜೋರಾಗಿ ನಡೆಯುತ್ತಿವೆ; ಜರ್ಮನರು ನೀಪಿಯರ್ ನದಿ ದಾಟಲು ಇನ್ನೂ ಶಕ್ತರಾಗಿಲ್ಲ.

ಅಮೇರಿಕದ ಡಿಸ್ಟ್ರಾಯರಿನ ಮೇಲೆ ಆಘಾತ

ಐಸ್‌ಲ್ಯಾಂಡಿಗೆ ಮೈಲುಗಳನ್ನು ತುಂಬಿ ತರುತ್ತಿದ್ದ ಒಂದು ಅಮೆರಿಕದ ಡಿಸ್ಟ್ರಾಯರಿನ ಮೇಲೆ ಒಂದು ಸಬ್‌ಮೆರೈನ್ ಆಘಾತಮಾಡಲೆತ್ನಿಸಿತು; ಆದರೆ ಗುರಿತಪ್ಪಿತು. ಬರ್ಲಿನಿನವರು ತಮಗೇನೂ ಇದರ ವಿಚಾರ ತಿಳಿಯದೆನ್ನುತ್ತಾರೆ. ಆದರೂ ಇದು ಜರ್ಮನಿಯವನೊಬ್ಬನ ಕೆಲಸವೆಂದು ಭಾವಿಸಲಾಗಿದೆ.

ಸರ್ ಸುಲ್ತಾನ್ ಅಹಮ್ಮದ್ ರವರು

ಸರ್ ಸುಲ್ತಾನ್ ಅಹಮ್ಮದ್ ರವರು ಗವರ್ನರ್ ಜನರಲ್‌ರ ಎಗ್ಸಿಕ್ಯುಟಿವ್ ಕೌನ್ಸಿಲಿನ ಲಾ ಮೆಂಬರರ ಕಾರ್ಯಗಳನ್ನು ತಾವು ನಿರ್ವಹಿಸಿರುವೆವೆಂದು ತಂತೀ ಮೂಲಕ ತಿಳಿಸಿಸಿವ್ಲುದ ಅತ್ತ ಹೊರಟಿರುವರು.

ಸ್ಥಳೀಯ ಸಂಸೆಗಳ ಕಾಂಗ್ರೆಸ್ ಪಾರ್ಟಿಗಳು

ಯುದ್ಧಫಂಡಿಗೆ ವಂತಿಗೆ ಕೊಡುವ ಸ್ಥಳೀಯ ಸಂಸ್ಥೆಗಳಿಂದ ಕಾಂಗ್ರೆಸ್ ಮೆಂಬರರು ಹಿಂದೆಗೆಯಬೇಕೆಂಬ ಗಾಂಧಿಜಿಯವರ ಆಜ್ಞೆಯ ಮೇರೆಗೆ, ನರಸರಾವೋಪೇಟ್, ಬೀಮಲಿಪಟಾಮುಗಳ ಮುನಿಸಿಪಲ್ ಕೌನ್ಸಿಲುಗಳ ಕಾಂಗ್ರೆಸ್ ಮೆಂಬರ ರೆಲ್ಲರೂ ತಮ್ಮ ಕೌನ್ಸಿಲುಸ್ಥಾನಗಳಿಗೆ ರಾಜಿಕೊಡಬೇಕಾಗಿದೆ.

ಮಿ। ಫಜಲುಲ್ ಹಕ್ಕರು

ಬಂಗಾಳ ಪ್ರಧಾನರಾದ ಮಿ। ಹಕ್ಕರು ನ್ಯಾಶನಲ್ ಡಿಫೆನ್ಸ್ ಕೌನ್ಸಿಲಿನ ತಮ್ಮ ಮೆಂಬರಿಕೆಯನ್ನು ಬಿಡಬೇಕೇ ಬೇಡವೇ ಎಂದು ಆಲೋಚಿಸಲು ಮುಸ್ಲಿಂ ಲೀಗಿನಿಂದ ಪಡೆದ ೧೦ ದಿನಗಳ ಅವಧಿ ಮುಗಿಯಿತು. ಇನ್ನೂ ಅವರೇನು ಮಾಡಬೇಕೆಂದು ನಿರ್ಧರಿಸಿಲ್ಲ. ಒಂದು ವೇಳೆ ಅವರು ಆ ಮೆಂಬರಿಕೆ ಬಿಡಬೇಕಾಗಿ ಬಂದರೆ, ತಮ್ಮ ಬಂಗಾಳ ಪ್ರಧಾನರ ಸ್ಥಾನವನ್ನೂ ತಾವು ಇನ್ನೂ ಇಟ್ಟುಕೊಳ್ಳಬೇಕೇ, ಬೇಡವೇ ಎಂಬುದನ್ನೂ ಜೆನ್ನಾಗಿ ಆಲೋಚಿಸುವರಾಗಿಯೂ ವಾರ್ತೆ.

ಸಿಲೋನಿಗೆ ಶಿಷ್ಟಮಂಡಲ

ಇಂಡಿಯ ಶಿಷ್ಟಮಂಡಲವೊಂದು ಅದರ ನಾಯಕರಾದ ಸರ್ ಗಿರಿಜಾ ಶಂಕರ್ ಬಜಪೀಯವರೊಡನೆ ಕೊಲೊಂಬೊವಿಗೆ ತಲುಪಿ ಸ್ವಾಗತಿಸಲ್ಪಟ್ಟಿತು. ಈ ಇಂಡೋ—ಸಿಲೋನೀನ್ ಕಾನ್ಫರೆನ್ಸ್, ಇಷ್ಟರಲ್ಲೇ ಜರುಗಲಾರಂಭಿಸಿದೆ.

NOTICE

In the Court of the Subordinate Judge of South Kanara

R. E. P. No. 9 of 1941.
Madras High Court C. S. 111 of 1940.

Between
The Dunlop Rubber Co. (India) Ltd.—**Petitioner.**
and
Marakada Bab Kamath & Sons, by partners Koraga Baba Kamath and 3 others. —**Respondents.**

To
2. Achuta Kamath, 3. M. Madhava Kamath, 4. M. Sanjiva Kamath, sons of Marakada Baba Kamath, residing near Kadri Market, Mangalore Town.

Please take notice that the above named petitioner filed the above Execution Petition for realisation of the monies due to them and the petition stands posted to 13—9—1941. You are hereby requested to appear before this Court to show cause why you should not be arrested and committed to civil jail in execution of the above decree failing which the petition will be decided in your absence.

G. Somashekar Rao,
Vakil for Petitioner.
Mangalore, 6—9—1941.

ಕೊನೆಯಚ್ಚೊತ್ತು

ಜರ್ಮನ್ ಸಬ್‌ಮೆರೈನ್ ಒಂದನ್ನು, ಅಮೆರಿಕದ ನ್ಯಾವೆಗಳು ಆಕ್ರಮಿಸಿದುದರಿಂದ ಜರ್ಮನರು ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದರು ಎಂದು ಜರ್ಮನಿಯ ಅಧಿಕಾರವಾಣಿಯು "ಗ್ರಿಯರ್" ಪ್ರಕರಣದ ಕುರಿತು ಪ್ರೆಸಿಡೆಂಟ್ ರುಜ್‌ವೆಲ್ಟರನ್ನೇ ದೂರುತ್ತಿರುವುದು—ಲೆನೆನ್‌ಗ್ರಾಡನ್ನು ರಷ್ಯದವರು ಪರಾಕ್ರಮದಿಂದ ರಕ್ಷಿಸುತ್ತ ಜರ್ಮನ್ ಬಲಗಳನ್ನು ಹಿಂದಕ್ಕೆ ಅಟ್ಟುತ್ತಿದ್ದಾರೆ, ಜರ್ಮನರ ನಷ್ಟ ವಿಪರೀತವಾಗಿದೆ;—ಇರಾನಿನಲ್ಲಿ ಇನ್ನೂ ಸಂಧಿಯ ಕೆಲವು ಅಂಶಗಳು ತೀರ್ಮಾನಕ್ಕೆ ಬಂದಿಲ್ಲವಾಗಿ ಬ್ರಿಟನ್-ರಷ್ಯದ ಅಧಿಕಾರಿಗಳು ಇರಾನಿಗೆ ಬರೆದಿದ್ದಾರೆ.

ಎಡಿಶನಲ್ ಟ್ರೆಜರಿ ಡೆಪ್ಯುಟಿ ಕಲೆಕ್ಟರ್

ಮಂಗಳೂರಿನ ಕಾಯಂ ಟ್ರೆಜರಿ ಡೆಪ್ಯುಟಿ ಕಲೆಕ್ಟರರು, ಟ್ರೆಜರಿಗಳ ಇನ್‌ಸ್ಪೆಕ್ಷನಿಗಾಗಿ ಕಾರ್ಕಳ, ಉಡುಪಿ, ಕುಂದಾಪುರಗಳ ಅತ್ತ ಕಡೆಗೆ ಹೊರಟಿರುವುದರಿಂದ ಅವರ ಬದಲಿಗೆ ಎಡಿಶನಲ್ ಟ್ರೆಜರಿ ಡೆಪ್ಯುಟಿ ಕಲೆಕ್ಟರ್ ಮಿ. ಎಚ್. ಜೆ. ಸ್ಟೂಕ್ಸ್ ಬಿ. ಏ. ಇವರು ಇಷ್ಟರಲ್ಲೇ ಚಾರ್ಜು ವಹಿಸಿಕೊಂಡಿರುವರು.

ಪಬ್ಲಿಕ್ ಪ್ರಾಸಿಕ್ಯೂಟರ್

ನಮ್ಮ ಈಗಿನ ಪಬ್ಲಿಕ್ ಪ್ರಾಸಿಕ್ಯೂಟರರಾಗಿರುವ ಶ್ರೀ. ಎಂ. ಕೆ. ನಂಬಿಯಾರ್, ಬಾರ್-ಎಟ್-ಲಾ ಇವರೇ, ಇನ್ನು ಮುಂದೆ ಮೂರು ವರ್ಷಗಳ ಕಾಲ ಅದೇ ಸ್ಥಾನದಲ್ಲಿರುವಂತೆ ನೇಮಕ ಹೊಂದಿರುವರೆಂದು ತಿಳಿದುಬರುತ್ತಿದೆ.



ಕೆಮ್ಮು, ಗೂರಲು ಮತ್ತು ಗಂಟಲುಬೇನೆಗಳಿಗೆ ನೇರವಾದ ಶ್ವಾಸನೀಯ ಚಿಕಿತ್ಸೆ

ಗಂಟಲು ಮತ್ತು ಪುಪ್ಪುಸಗಳಿಗೆ ಭಾದೆತರುವ ವಿಷಾಣುಗಳನ್ನು ನೀವು ಶ್ವಾಸಿಸಿಕೊಂಡಂತೆ ಅವುಗಳ ಪರಿಹಾರವನ್ನು ಎದುರಿಸಲು ಚಿಕಿತ್ಸೆಯನ್ನು ಶ್ವಾಸದೊಂದಿಗೇ ಪಡೆಯಬೇಕು; ಪೆಪ್ಸ್, ಈ ಆದರ್ಶ ಹಾಗೂ ನೇರವಾದ ಚಿಕಿತ್ಸೆಯನ್ನೊದಗಿಸುತ್ತದೆ.

ಪೆಪ್ಸ್ ನಿಮ್ಮ ಬಾಯಿಯಲ್ಲಿ ಕರಗಿ, ಅಮೂಲ್ಯ ಔಷಧೀಯ ಸಾರಗಳನ್ನು ಹೊರಸೂಸಿ,—ಇವು ನಿಮ್ಮ ಶ್ವಾಸದೊಡನೆ ಬೆರೆತು,—ಚಿತ್ರದಲ್ಲಿ ತೋರುವಂತೆ,—ಪುಪ್ಪುಸಗಳೊಳಗೆ ಆಳಕ್ಕೂ ಸೇರುತ್ತವೆ. (1) ಔಷಧ ದ್ರಾವಕಗಳು ನುಮ್ಮೆನೆ ಹೊಟ್ಟೆಯೊಳಕ್ಕೆ ಸೇರುತ್ತದೆ. (2) ಹಾಗೆ, ಪೆಪ್ಸ್ ಗಂಟಲನ್ನು ಉಪಶಮನಗೊಳಿಸಿ, ಶ್ವಾಸೋಚ್ಛ್ವಾಸವನ್ನು ಸುಲಭಗೊಳಿಸಿ, ದೀರ್ಘಕಾಲದ ಕೆಮ್ಮು, ನೆಗಡಿ, ಥಂಡಿ, ಗೂರಲು ಮುಂತಾದುವನ್ನು ಶೀಘ್ರ ಗುಣಪಡಿಸುತ್ತದೆ ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ್‌ನ್ನು ಒಂದು ರೂಪಾಯಿಯುಂತೆ ಮಾರುತ್ತಾರೆ.

ಏಜಂಟರು:— ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ. ಮದ್ರಾಸು.

ಪೆಪ್ಸ್ ಸೇವಿಸಿ

PEPS

ವಿಷಹಾರಕ ಶ್ವಾಸನೀಯ ಬಿಲ್ಲೆಗಳು.

ಮಂಗಳೂರು

ಆಗಮನದ ವಾರ್ತೆ

ಹಿಂದೂ ರಿಲೀಜಿಯಸ್ ಎಂಡೋಮೆಂಟ್ಸ್ ಬೋರ್ಡಿನ ಕಮಿಶನರರಾದ ಶ್ರೀ। ಎ. ಎಸ್. ಮನ್ನಾಡಿ ನಾಯರ್, ಅವರು ಇದೇ ತಾ. ೧೬ಕ್ಕೆ ಮದ್ರಾಸಿನಿಂದ ಮಂಗಳೂರಿಗೆ ಹೊರಡುತ್ತಾರೆ. ಪಶ್ಚಿಮ ಕರಾವಳಿಯ ದೇವಸ್ಥಾನಗಳನ್ನು ಅವರು ನೋಡಿಕೊಂಡು, ಮದ್ರಾಸಿಗೆ ಬರುವ ಅಕ್ಟೋಬರ ತಾ. ೨ಕ್ಕೆ ಹಿಂದಿರುಗುವರೆಂದು ತಿಳಿದುಬರುತ್ತಿದೆ.

ಅಸಿ। ರಿಕ್ರ್ಯೂಟಿಂಗ್ ಆಫೀಸರರ ಸಂಚಾರ

ಅಸಿ। ರಿಕ್ರ್ಯೂಟಿಂಗ್ ಆಫೀಸರರಾದ ಲೆ। ಪಿ. ಕೆ. ಮೆನೊನರು ಇದೇ ಸೆಪ್ಟೆಂಬರ ತಾ. ೨೧ರಲ್ಲಿ ಬೆಂಗಳೂರಿಂದ ಮೈಸೂರು ಕೊಡಗು ಮಾರ್ಗವಾಗಿ ಮಂಗಳೂರಿಗೆ ಬರುವರು. ತಾ. ೨೨ರಲ್ಲಿ ಅವರು ಮಂಗಳೂರಲ್ಲಿ ಇದ್ದು ೨೩ಕ್ಕೆ ಕುಂದಾಪುರಕ್ಕೆ ತೆರಳಿ, ೨೪ಕ್ಕೆ ಅಲ್ಲಿಂದ ಚೈಂದೂರಿಗೆ ಹೋಗುವರು. ಅಲ್ಲಿ ತಾ. ೨೫ರಲ್ಲಿ ಕ್ಯಾಂಪು ಮಾಡಿ ತಾ. ೨೬ಕ್ಕೆ ಉಡುಪಿಗೆ ಬಂದು ತಾ. ೨೭ರಲ್ಲಿ ಉಡುಪಿಯಲ್ಲಿದ್ದು ತಾ. ೨೮ರಲ್ಲಿ ಕಾರ್ಕಳಕ್ಕೂ ಮುಂದೆ ಮಂಗಳೂರಿಗೂ ಆಗಮಿಸುವರು. ೨೯ರಲ್ಲಿ ಮಂಗಳೂರಿಂದ ಕಣ್ಣಾನೂರಿಗೆ ಪಯಣ ಬೆಳಸುವರು.

ಕೆಲಸಗಾರರಿಗೆ ಯುದ್ಧಕಾಲದ ಭತ್ತೆ

ಸ್ಥಳೀಯ ಹಂಚು ಕಾರ್ಖಾನೆಯವರಾದ ಮೆ। ಎಂ. ರೆಬೆಲ್ಲೊ ಎಂಡ್ ಸನ್ಸ್‌ರವರು ತಮ್ಮ ಎರಡು ಕಾರ್ಖಾನೆಗಳಲ್ಲಿ ಕೆಲಸಮಾಡುತ್ತಿರುವ ಯಾವತ್ತು ಕೆಲಸಗಾರರಿಗೂ, ಅವರ ದಿನ ಮಜೂರಿಯೊಡನೆ, ರೂಪಾಯಿ ಒಂದಕ್ಕೆ ಒಂದಾಣೆಯಂತೆ, ಧಾರಣೆವಾಸಿಯ ತುಟ್ಟಿಯ ಸಂಬಂಧ, ಭತ್ತೆ ಕೊಡುವ ಔದಾರ್ಯ ನೀತಿಯನ್ನು ಅನುಸರಿಸಿರುವರು. ಈ ಸಂಬಂಧ ಅವರಿಗೆ ವರ್ಷಕ್ಕೆ ೩ ಸಾವಿರ ರೂಪಾಯಿಗಳು ಹೆಚ್ಚಾಗಿ ಬೇಕಾಗುವುದು. ಅವರು ಈ ಭತ್ತೆಯನ್ನು ಯುದ್ಧ ನಡೆಯುವಷ್ಟು ಕಾಲವೂ ಕೊಡುವೆವೆಂದು ವಾಗ್ದಾನಮಾಡಿದ್ದಾರೆ. ಈ ಉದಾಹರಣೆಯನ್ನು ಹಂಚು ಕಾರ್ಖಾನೆಗಳ, ಇತರ ವರ್ಕ್‌ಶಾಪುಗಳ, ಬೀಡೀ ಕಾರ್ಖಾನೆಗಳ, ಕಾಫಿ ಕ್ಯೂರಿಂಗ್ ವರ್ಕ್ಸ್‌ಗಳ, ಗೇರುಬೀಜದ ಕಾರ್ಖಾನೆಗಳ, ಮುದ್ರಾಲಯಗಳ, ವಿದ್ಯಾ ಸಂಸ್ಥೆಗಳ ಮಾಲಕರೂ ಅನುಸರಿಸುವಂತಾದರೆ, ಶ್ರಮಜೀವಿಗಳಲ್ಲಿ ಎಲ್ಲೆಲ್ಲೂ ಈಗ ಕೇಳಿಬರುತ್ತಿರುವ ದೂರುಗಳು ಕಡಿಮೆಯಾದೀತೆನ್ನುವಲ್ಲಿ ಸಂದೇಹವಿಲ್ಲ.

ಶುದ್ಧೀ ಸಂಸ್ಕಾರ

ಜನ್ಮತಃ ನಾಯರ್ ಮನೆತನಕ್ಕೆ ಸೇರಿದವರಾಗಿದ್ದು, ಸುಮಾರು ೮ತಿಂಗಳ ಹಿಂದೆ ಮುಸಲ್ಮಾನ್ ಧರ್ಮವನ್ನಾಶ್ರಿಸಿದ್ದ ದಂಪತಿಗಳೂ ಅವರ ಮಕ್ಕಳು ಮೂವರೂ ಹೀಗೆ ಐದು ಮಂದಿಯುಳ್ಳ ಒಂದು ಕುಟುಂಬವನ್ನು ಶುದ್ಧೀ ಸಂಸ್ಕಾರದ ಮೂಲಕ ಹಿಂದೂ ಧರ್ಮಕ್ಕೆ ಪುನಃ ಬರಮಾಡಿಕೊಳ್ಳಲಾಯಿತು. ಈ ಸಂಸ್ಕಾರ ಈಚಿಗೆ ಸ್ಥಳೀಯ ಆರ್ಯ ಸಮಾಜದಲ್ಲಿ ಶ್ರೀ।ಗಳಾದ ಬಿ. ಮೋಹನಪ್ಪ ತಿಂಗಳಾಯ ಮತ್ತು ಬಸ್ತಿ ದಾಸಪ್ಪ ಶೆಣೈಯವರ ಪೌರೋಹಿತ್ಯದಲ್ಲಿ ನಡೆಯಿತು.

ಆಟದ ಕ್ಷೇತ್ರದಲ್ಲಿ ಮಾರಾಮಾರಿ

ಸ್ಥಳೀಯ "ಹಾಕಿ" ಕ್ಷೇತ್ರದಲ್ಲಿ "ಹಾಕಿ" ಟೂರ್ನಮೆಂಟ್ ನಡೆಯುತ್ತಿದ್ದು, ಈಚಿಗೆ ಆ ಪಂದ್ಯಾಟದಲ್ಲಿ ಕದ್ರಿ ಟೀಮೂ, ರಿಜರ್ವ್ ಪೋಲಿಸ್ ಟೀಮೂ ಭಾಗಿಗಳಾಗಿದ್ದಾಗ, ಮಾತಿಗೆ ಮಾತು ಬಂದು ಏಟುಗಳಿಗೂ ಅವಕಾಶವಾಯಿತು. ಒಬ್ಬರನ್ನು ಆಸ್ಪತ್ರೆಗೂ ಸಾಗಿಸಬೇಕಾಯಿತು. ಪ್ರೇಕ್ಷಕರಲ್ಲಿ ಕೆಲವರಿಗೂ ಆ ಗಲಾಟೆಯಲ್ಲಿ ಪ್ರಹರ ಪೂಜೆಯಾಗಿ ಹೋಯಿತೆಂದು ತಿಳಿದು ಬಂದಿದೆ.

ಬೀಡೀ ಕೆಲಸಗಾರರ ಸಭೆ

ಕಳೆದ ಆದಿತ್ಯವಾರ ಸಂಜೆ ಬೀಡೀ ಕೆಲಸಗಾರರ ಸಭೆಯೊಂದು ಮೈದಾನಿನಲ್ಲಿ ನೆರೆದಿತ್ತು. ಶ್ರೀ। ಅಹಮ್ಮದ್ ಬಾವಾರವರು ಅಧ್ಯಕ್ಷತೆ ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಬೀಡೀ ಕೆಲಸಗಾರರ ತುಟ್ಟಿ ಭತ್ತೆಯ ಕೇಳಿಕೆಯ ವಿಚಾರವನ್ನು ಸಮರ್ಥಿಸಿ ಮಾತಾಡುತ್ತ ಮಾಲಕರು ಆ ಕೇಳಿಕೆಯ ಕುರಿತು ಕೊಟ್ಟಿರುವ ಉತ್ತರ ಮತ್ತು ಹೇಳಿರುವ ಸಮಾಧಾನಗಳನ್ನು ವಿಮರ್ಶಿಸಿದರು. ಒಟ್ಟಿನಲ್ಲಿ ಅವರ ಭಾಷಣವು ಬೀಡೀ ಕೆಲಸಗಾರರ ಕೇಳಿಕೆಯ ವಿಚಾರದಲ್ಲಿ ಜನತೆಯ ಸಹಾನುಭೂತಿಯನ್ನು ಸಂಪಾದಿಸುವಂಥದಾಗಿತ್ತು.

ನಾವಿಕರ ಕಿಂಗ್ ಜಾರ್ಜ್ ನಿಧಿಯ ಜನರಲ್ ಕೌನ್ಸಿಲಿಗೆ ದಾನ

"ಮದ್ರಾಸಿನ ಮಾನ್ಯ ಗವರ್ನರರಾದ ತಮ್ಮ ಯುದ್ಧಫಂಡಿನಿಂದ, ಕಿಂಗ್ ಜಾರ್ಜರ ಫಂಡಿನ ನಾವಿಕರ ಬಗೆಗಾಗಿರುವ ನಿಧಿಗೆ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯದ ಮೂಲಕ, ಇನ್ನೊಂದು ಮೊತ್ತವು,—೧೦೦ ಪೌಂಡುಗಳು, ಕೈ ಸೇರಿದೆ. ಈ ವಂತಿಗೆಗಾಗಿ, ಪ್ರೆಸಿಡೆಂಟರಾದ ಎಚ್. ಆರ್. ಎಚ್. ಡ್ಯೂಕರವರು, ತಮಗೂ ತಮ್ಮ ಯುದ್ಧನಿಧಿಯ ಕಮಿಟಿಗೂ, ತಮ್ಮ ಹಾಗೂ ಈ ಜನರಲ್ ಕೌನ್ಸಿಲಿನ ಮನಃಪೂರ್ವಕವಾದ ವಂದನೆಗಳನ್ನು ತಿಳಿಸಬೇಕೆಂದು ಇನ್ನೊಮ್ಮೆಯೂ ನನಗೆ ಅಪ್ಪಣೆಮಾಡಿರುತ್ತಾರೆ. ಈ ಸಂದರ್ಭದಲ್ಲಿ ನಮಗೆ ಸ್ಥಳೀಯವಾದ ಹಾಗೂ ಸಮುದ್ರಾಚೆಯ ಕಡೆಗಳ ಉತ್ಕೃಷ್ಟ ಬೆಂಬಲದಿಂದ ಒಟ್ಟಿಗೆ ಈ ನಿಧಿಗೆ ೩೮,೦೦೦ ಪೌಂಡುಗಳಿಗೂ ಮಿಕ್ಕಿ ಸಂಗ್ರಹವಾಗಿದೆ ಎಂದು ತಿಳಿಸಬೇಕಾಗಿದೆ. ಈ ಮೊತ್ತದಲ್ಲಿ ೨೨,೦೦೦ ಪೌಂಡುಗಳಷ್ಟನ್ನು ಯುದ್ಧಕ್ಕಿಕ ವಿಚಾರ ನೋಡುವ "ನ್ಯಾಶನಲ್ ಸೊಸೈಟಿ"ಗಳಿಗೆ ಆಗಲೇ ಪ್ರಿಲಿಮ್ನರಿ ಗ್ರಾಂಟಿನ ರೂಪದಲ್ಲಿ ಕೊಡಲಾಗಿದೆ. ಬೇಗನೆ ಈ ನಿಧಿ ಅರ್ಧ ಮಿಲ್ಯಕ್ಕೇರಬಹುದೆಂದು ಹಾರೈಸಲಾಗಿದೆ"—ಹೀಗೆಂದು ಆ ಜನರಲ್ ಕೌನ್ಸಿಲಿನ ಡೆಪ್ಯುಟಿ ಚೆಯರ್‌ಮ್ಯಾನರು ನಮ್ಮ ಗವರ್ನರರಿಗೆ ಸಂದೇಶ ಕಳಿಸಿರುವರೆಂದು ಪ್ರಾಂತಿಕ ಯುದ್ಧ ಸಮಿತಿಯ ಡೆಪ್ಯುಟಿ ಸೆಕ್ರಟರಿಗಳು ತಿಳಿಸುತ್ತಾರೆ.

ನೋಟೀಸು

ಮಂಗಳೂರು ಡಿ। ಮುನ್ಸಿಫ್ ಕೋರ್ಟ್‌ನಲ್ಲಿ

R. E. P. No. 259/41.
& R. E. A. No. 646/41.
O. S. No. 362/1937.

P. ನಾರಾಯಣ ವೈಜಪ್ಪ ಭಂಡಾರಿ— **ಅರ್ಜಿದಾರ**

ಮತ್ತು

ಅಬ್ದುಲ್ ಖಾದರ್ ಅಸನಿ ಸಹಾ— **ರೆಸ್ಪೊಂಡೆಂಟರು.**

ಇವರೊಳಗೆ

3ನೆ ರೆಸ್ಪೊಂಡೆಂಟ ನರಿಕೊಂಬು ವೆಂಕಟ್ರಾವ್—ನರಿಕೊಂಬು ರಾಮರಾಯರ ಮಗ, ಮಂಗಳೂರು ತಾಲೂಕು ಮೂಡಗ್ರಾಮದಲ್ಲಿರುವವರು;

4ನೆ ರೆಸ್ಪೊಂಡೆಂಟ ನರಿಕೊಂಬು ಸೂರ್ಯನಾರಾಯಣರಾವ್-ಮ್ಯಾನರ್-ಗಾರ್ಡಿಯನ್ 3ನೆ ರೆಸ್ಪೊಂಡೆಂಟ ನರಿಕೊಂಬು ವೆಂಕಟ್ರಾವ್—ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ಅಮ್ಲಜ್ಯಾರಿ ವ್ಯವಹರಣೆಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಯ ಬಾಬ್ತು ಅರ್ಜಿದಾರನು ಹಾಜರುಪಡಿಸಿದ ಏಲಂ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವರೆಯೂ ಮತ್ತು ಏಲಂ ಸಮಯ ಬಿಡ್‌ಮಾಡುವರೆ, ವಹಾಗೆ ಬಿಡ್‌ಮಾಡಿ ಆಖೈರ ದರಖಾಸ್ತಿಗೆ ಅರ್ಜಿದಾರನು ಪಡಕೊಂಡಲ್ಲಿ ದರಖಾಸ್ತ್ ಹಣ ಪೈಸ್ಲೆ ಹಣದಲ್ಲಿ ಮುಜ್ರಿ ಮಾಡುವರೆ ಪರ್ಮಿಶನ್ ಕೊಡಬೇಕಾಗಿ ದಾಕ್ಲು ಮಾಡಿದ R. E. A. 646/41ನೆ ಅರ್ಜಿ ಸಹಾ ತಾರೀಕು 2-10-1941ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ.

ಸದರಿ ದಿವಸ ನೀವು ಖುದ್ದುನಿಂದಾಗಲೀ ವಕೀಲರ ಮುಖಾಂತರವಾಗಲೀ ಹಗಲು ಘಂಟೆ 10-30ಕ್ಕೆ ಕೋರ್ಟು ಮುಂದೆ ಹಾಜರಾಗಿ ಉದಹರಿಸುವರೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸೋಣಾಗುವುದು.

By Order of Court
M. Janardan Malya,
Vakil for Petitioner.
Mangalore, 6—9—1941.

ರಿಜಿಸ್ಟರ್ಡ್ ನಂ. 18024.

ರಕ್ತವೃದ್ಧಿಗೆ— ವೀರ್ಯಪುಷ್ಟಿಗೆ

ವೀರ ರತ್ನ ನಂ. 1.

ವೀರ್ಯ (ಧಾತು) ನಷ್ಟದಿಂದುಂಟಾದ ಸಮಸ್ತ ವ್ಯಾಧಿಗಳಿಗೆಲ್ಲಾ ಅಮೃತಪ್ರಾಯವಾದದ್ದು

ಇಂದ್ರಿಯವು ನಿರಾಗಿ ಸೋರುವಿಕೆ, ಮುಷ್ಟಿ ಮೈಥುನ, ಸ್ವಪ್ನಾವಸ್ಥೆ, ವೃದ್ಧಾಪ್ಯ, ಅಜೀರ್ಣ, ಮಲಬದ್ಧತೆ, ನರಗಳ ನಿಶ್ಶಕ್ತಿ, ನಪುಂಸಕತ್ವವೇ ಮುಂತಾದ ಭಯಂಕರ ವ್ಯಾಧಿಗಳನ್ನು ಬಹು ಶೀಘ್ರದಲ್ಲೇ ಗುಣಪಡಿಸಿ ನವಯೌವನವನ್ನುಂಟುಮಾಡಿ ದೀರ್ಘಕಾಲ ರತಿಸುಖವನ್ನನುಭವಿಸುವಂತೆಮಾಡುವುದು. ಪಥ್ಯವೇನು ಇಲ್ಲ. ಅನುಪಾನ ಪತ್ರಿಕೆ ಔಷಧಿಯ ಜೊತೆಯಲ್ಲುಂಟು. ಬೆಲೆ: ½ ಪೌಂ. ರೂ. 1-8-0. ¼ ಪೌಂ. ಆಣೆ 0-14-0

ವೀರ ರತ್ನ (ನಂ. 2) ತೈಲ

ಇದನ್ನು ಜನನೇಂದ್ರಿಯದ ಮೇಲೆ ಹಚ್ಚುವುದರಿಂದ ಬಾಲ್ಯದ ಅನೇಕ ದುರಭ್ಯಾಸಗಳಿಂದಲೂ, ಅತಿಭೋಗದಿಂದಲೂ, ಮುಷ್ಟಿ ಮೈಥುನಗಳಿಂದಲೂ, ಜನನೇಂದ್ರಿಯವು ಬಿಗಿತಪ್ಪಿ ಡೊಂಕಾಗಿರುವಿಕೆ ಅದರಿಂದುಂಟಾದ ನರಗಳ ದೌರ್ಬಲ್ಯ, ನಪುಂಸಕತ್ವವೇ ಮುಂತಾದುವನ್ನು ಶೀಘ್ರದಲ್ಲಿಯೇ ಗುಣಪಡಿಸಿ ನರಗಳಲಿ ಬಲವನ್ನುಂಟುಮಾಡಿ ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ನೂರಾರು ಮಾತುಗಳಿಂದೇನು? ಉಪಯೋಗವೇ ನಿಜವಾದ ಉದಾಹರಣೆ ಇದರಿಂದ ಗಾಯ ಗುಳ್ಳೆಗಳಾಗುವುದಿಲ್ಲ. ಬೆಲೆ: ಅರ್ಧ ತೊಲೆ ಸೀಸೆ 1ಕ್ಕೆ ರೂ. 1—4—0.

ಪತ್ರವ್ಯವಹಾರಗಳು ಗುಟ್ಟಾಗಿಡಲ್ಪಡುವುದು ಅಂಚೆವೆಚ್ಚ ಬೇರೆ.

ವೀರ ರತ್ನ ಫಾರ್ಮಸಿ, 20 ಸ್ಪೆನ್ಸರ್ ಬಜಾರ್ ನ್ಯೂ ಮಾರ್ಕೆಟ್, ಬೆಂಗಳೂರು, ಸಿಟಿ (K.)

THE BANK OF MANGALORE LTD., MANGALORE

Balance Sheet as at 30th June 1941

CAPITAL & LIABILITIES

Paid-up Capital	—	—	—	20,865	0 0
General & Contingent Reserves	—	—	—	5,900	0 0
Income-tax Reserve	—	—	—	1,350	1 0
Due to Bankers				nil	
Deposits	—	—	—	1,32,152	3
Bills for Collections	—	—	—	21,57	2
Sundries including Profits	—	—	—	3	11
				1,8	12 4

PROPERTY & ASSETS

Furniture & Safes	—	—	—	1,400	0 0
Authorised Investments	—	—	—	1,16,164	6 10
Investment on Govt. Securities			—	7,854	0 0
Fixed Deposit with a Scheduled Bank			—	10,000	0 0
Bills per Contra	—	—	-	21,574	1 2
Sundries	—	—	—	3,585	3 0
Cash-in-hand & with Bankers at Call			—	24,496	1 4
				1,85,073	12 4

ಪ್ರಪಂಚದ ಪಾನಿಪತ್ತು

ಇರಾನಿನ ಕಾರ್ಯಭಾರಗಳು

ಇಲ್ಲೊಂದು 'ಪಾನಿಪತ್ತು' ಏಸ್ತರಿಸಬಹುದೆಂಬ ಭಯವೀಗ ಪರಿಹಾರವಾಯಿತು. ಬ್ರಿಟನ್ ಮತ್ತು ರಷ್ಯಗಳ ಕಾಲೋಚಿತ ಪ್ರವೃತ್ತಿಯಿಂದಲೂ, ಇರಾನ್ ಸರಕಾರದ ಏವೇಕ ಪೂರ್ಣನಾದ ದೂರದೃಷ್ಟಿಯಿಂದಲೂ, ಗುಡ್ಡದಂತೆ ಬರಬಹುದಾಗಿದ್ದ ಏಪತ್ತು ಕಡಿಮಂತೆ ತೋರಿ ಅಡಗಿತು. ಸದ್ಯ ತಾತ್ಕಾಲಿಕ ಶಾಂತಿಯ ಶರತ್ತುಗಳು ಯಾವುನೆಂದು ಅಧಿಕಾರಯುತವಾಗಿ ತಿಳಿದು ಬಾರದಿದ್ದರೂ ಬ್ರಿಟನ್ ರಷ್ಯಾ ಹಾಗೂ ಇರಾನ್ ಸರಕಾರಗಳೊಳಗೊಂದು ಒಪ್ಪಂದ, ವಿಶಾಲವಾದ ಸೂತ್ರಗಳ ಆಧಾರದ ಮೇಲೆ-ನಡೆದಿದೆ ಎಂದು ಹೇಳಲಾಗಿದೆ. ಇವೆಲ್ಲ ವ್ಯವಹಾರ ನಡೆಯುತ್ತಿರುವುದು ತೆಹರಾನಿನಲ್ಲಿ.

ಈಗ ಕುಲಂಕಷವಾದ ಸಂಧಿಯ ಜಿಜ್ಞಾಸೆ ನಡೆಯುತ್ತಿದ್ದು ಇಷ್ಟರಲ್ಲೇ ಅದು ಕೊನೆಗಂಡಿರಲೂ ಬಹುದಾದುದರಿಂದ, ಜರ್ಮನರಿಂದ ಯಾವ ಕೀಲೋಕ್ಚಾಟನದ ಚಳವಳವೂ ಇನ್ನು ಅಲ್ಲಿ ಸಾಧ್ಯವಿಲ್ಲವೆಂದು ನಂಬಲಾಗಿದೆ. ಅಲ್ಲಿನ್ನು ಜರ್ಮನರ ಕುರಿತು ಯಾವ ಅಪ್ಪಣೆ ಹೊರಡುವುದೆಂದು ಬೇಗನೆ ಸ್ಪಷ್ಟವಾಗಲಿದೆ.

ಈ ಸಂಧಿ ವ್ಯವಹಾರದಲ್ಲಿ ಸಾಕಷ್ಟು ಸ್ಪಷ್ಟತೆ ಇರಬೇಕು; ಜರ್ಮನರು ಅಲ್ಲಿಂದ ಒಕ್ಕಲು ತೆಗೆಯುವ ಕುರಿತು ವಿಳಂಬಿಸಬಾರದು ಎಂದು ಸಿಮ್ಲದವರು ಅಭಿಪ್ರಾಯಪಡುತ್ತಿದ್ದಾರೆ. ಈ ವ್ಯವಹಾರದಲ್ಲಿ ತೋರಿ ಬರುವ ಯಾವ ದೌರ್ಬಲ್ಯವಾದರೂ, ಇಂಡಿಯದ ಕ್ಷೇಮಕ್ಕೆ ಬಾಧಕವೆಂಬುದೇ ಸಿಮ್ಲದವರ ಆ ಅಭಿಪ್ರಾಯಕ್ಕೆ ಕಾರಣ.

ಜಪಾನ್—ಅಮೆರಿಕಗಳಲ್ಲಿ ಶಾಂತಿಯೋ? ಸಂಗ್ರಾಮವೋ?

ಜಪಾನ್ ಅಮೆರಿಕಗಳ "ಬಾಂಧವ್ಯದ ಗುಟ್ಟು" ಇನ್ನೂ ಸರಿಯಾಗಿ ತಿಳಿದಿಲ್ಲ. ಅವುಗಳೊಳಗಿನ ಮಾತುಕತೆಗಳು ಇನ್ನೂ ಮುಗಿದಿಲ್ಲ.

ಬುದ್ಧಿವಂತರು ಒಬ್ಬೊಬ್ಬರು ಒಂದೊಂದು ಹೇಳುತ್ತಾರೆ. ಪರಿಸ್ಥಿತಿಯೂ ಹಾಗೇ ಅನಿಶ್ಚಿತವಾಗಿದೆ. ಜಪಾನರು ಚೀನದಿಂದ ಸಂಪೂರ್ಣವಾಗಿ ಹಿಂದೆಗೆಯಲಿ, ತಮ್ಮ ನೌಕಾಬಲವನ್ನು ಸಣ್ಣದು ಮಾಡಿಕೊಳ್ಳಲಿ;— ಹಾಗೆ ಮಾಡಿದರೆ, ಜಪಾನೀಯರು ಮುಂಚಕ್ಕಾವೋ ಮತ್ತು ಇಂಡೋ ಚೀನದಲ್ಲಿ ಇರುವಂತೆ ಬಿಡಬಹುದು ಎಂದು ವಾಷಿಂಗ್ಟನ್ನಿನ ಉಚ್ಚಾಧಿಕಾರಿಗಳು ಕೆಲವರ ಅಭಿಪ್ರಾಯ.

ಆದರೆ ಜಪಾನರು ಚೀನವನ್ನು ಬಿಡಲೊಪ್ಪುವುದಾಗಲೀ, ನೌಕಾಬಲವನ್ನು ಸಣ್ಣದು ಮಾಡಿಕೊಳ್ಳುವುದಾಗಲೀ ಸಾಧ್ಯವೆಂದು ತೋರದು. ಅಷ್ಟೇ ಅಲ್ಲ; ಮಂಚಕಾವೋ ಮತ್ತು ಇಂಡೋ ಚೀನಗಳನ್ನು ಜಪಾನರ ವಶ ಬಿಟ್ಟ ಪಕ್ಷದಲ್ಲಿ, ಅದರಿಂದ ಜಪಾನರಿಗೆ ಮುಂದೆ ವಿಸ್ತರಣದ ಕಾರ್ಯಕ್ಕೆ ಸುಲಭವಾಗುತ್ತಿದೆ, ಚೀನದ ರಕ್ಷಣೆಗೆ ಭಂಗ ಬರುತ್ತದೆ ಎಂದು ಇನ್ನು ಕೆಲವರ ಹೇಳಿಕೆ.

ನಾವು ಕಂಡ ಹಾಗೆ, ಪೂರ್ವದೇಶಗಳಲ್ಲಿನ ಅಮೆರಿಕದ ಕಾರ್ಯನೀತಿಯು ೧೯೩೭ನೇ ಇಸ್ವಿಯ ಪ್ರಕಟಣೆಯಂತೇ ಇದೆ. ಬಲಾತ್ಕಾರದಿಂದ ಸಂಪಾದಿಸಿದ ರಾಷ್ಟ್ರಗಳ ಮೇಲಿನ ಅಧಿಕಾರವನ್ನು ಅಮೇರಿಕ ವೊಪ್ಪುವುದಿಲ್ಲ. ಮಾತ್ರವಲ್ಲ; ಸಮುದ್ರ ಸ್ವಾತಂತ್ರ್ಯವನ್ನೂ ರಕ್ಷಿಸಿಕೊಳ್ಳಬೇಕೆಂಬುದೇ ಅದರ ಉದ್ದೇಶ.

ಹೀಗಿರುವಲ್ಲಿ ಜಪಾನೇ ಆಗಲೀ, ಅಮೆರಿಕವೇ ಆಗಲಿ-ತಮ್ಮ ಮೂಲತತ್ತ್ವಗಳನ್ನು ಕೈ ಬಿಡದೆ ಶಾಂತಿ ನೆಲಸುವುದು ಸಾಧ್ಯವಲ್ಲ. ಜಪಾನು ಅಮೆರಿಕದ ತತ್ತ್ವಗಳಿಗೆ ಶರಣು ಹೋದರೆ, ಆಗ ಜಪಾನು ೧೯೩೧ರಿಂದ ನಡೆಸಿದ ಮುಕ್ಕಾಲು ಪಾಲು ಕಾರ್ಯಭಾಗಗಳೆಲ್ಲ ಕುಸಿದು ಬೀಳುವುವು. ಅಷ್ಟೇ ಅಲ್ಲ; ಆಗ ಅಮೆರಿಕವು ರಷ್ಯಾ ಮತ್ತು ಚೀನಗಳಿಗೆ ಯಾವ ಸಹಾಯವನ್ನೂ ಕೊಡಲಾರದು.

ಇದಿಷ್ಟರಲ್ಲಿ, ಸರಕಾರದ ವಶವಿರುವ ಜಪಾನೀ ಪತ್ರಿಕೆಗಳು "ಜಪಾನು ಯಾವ ಕಾರಣದಿಂದಲಾದರೂ ತನ್ನ ಹಿಂದಿನ ಯೋಜನೆಗಳನ್ನು ಬದಲಾಯಿಸಲಾಗದು" ಎನ್ನುತ್ತಿವೆ. ಹಾಗೇ ಅಮೆರಿಕವೂ ತಾನು ಜಪಾನಿಗೆ ಬಿಟ್ಟುಕೊಡುವುದರಲ್ಲಿಲ್ಲ; ರಷ್ಯದ, ಚೀನದ ಸೇನೆಗಳಿಗೆ ಯುದ್ಧ ಸಾಮಗ್ರಿಗಳನ್ನು ಒದಗಿಸುವುದನ್ನು ನಿಲ್ಲಿಸುವ ಹಾಗಿಲ್ಲ.

ಈ ಮಧ್ಯೆ ಈಚಿಗೆ ಬಂದ ವಾರ್ತೆಯ ಮೇರೆಗೆ "ಪ್ರಿನ್ಸ್ ಕೊನೆಯ"ರವರು ತಮಗೆ ಪ್ರೆಸಿಡೆಂಟ್ ರುಜ್‌ವೆಲ್ಟರು ಪೆಸಿಫಿಕ್ಕಿನಲ್ಲಿ ಭೇಟಿ ಕೊಡಬೇಕೆಂದು ಆಹ್ವಾನಿಸಿರುವುದು ನಿರಾಧಾರವೆಂದು ತೇಳಲಾಗಿದೆ. ಇದೇ ಕುರಿತು "ನ್ಯೂಸ್ ಕ್ರಾನಿಕಲ್" ಬರೆದಿರುವ ಲೇಖ ಸ್ವಾರಸ್ಯವಾಗಿದೆ.

"ಪ್ರೆಸಿಡೆಂಟ್ ರುಜ್‌ವೆಲ್ಟರು ಪ್ರಿನ್ಸ್ ಕೆನೊಯವರ ಮಧುರ ವಚನಗಳಿಂದ ಮೋಸ ಹೋಗಲಾರರು. ಯುರೋಪಿನಲ್ಲಿ ಜರ್ಮನಿಯನ್ನು ಎದುರಿಸುವುದೂ, ಪೆಸಿಫಿಕ್ಕಿನಲ್ಲಿ ಜಪಾನನ್ನು ಸಂತೈಸುವುದೂ ಇವೆರಡೂ ಮಿ। ರುಜ್‌ವೆಲ್ಟರ ಪ್ರಕಟಿತವಾದ ಕಾರ್ಯಾಚರಣೆಯನ್ನು ಅರ್ಥರಹಿತವಾಗಿ ಮಾಡುವುವೆಂಬುದನ್ನು ಅವರು ಬಲ್ಲರು. ಈ ಸಮಯದಲ್ಲಿ ಜಪಾನಿಗೆ ಕೊಡಬಹುದಾದ ಅರಿಯಾಯಿತಿ ಎಂಬುದು ಬ್ರಿಟನ್ ಮತ್ತು ರಷ್ಯಗಳ ಬೆನ್ನಿಗೆ ತಿವಿದಂತೆಯೇ ಸರಿ!"

ಈ ಸ್ಪಷ್ಟೋಕ್ತಿಗಳು ಸಕಾರಣವಾದುದೇ, ಅಕಾರಣವಾದುದೇ ಎಂದು ತಿಳಿಯಲು ನಾವು ಮುಂದಿನ ಸಂದರ್ಭಗಳನ್ನು ಕಾಯಬೇಕು. ಅಮೆರಿಕ ಜಪಾನುಗಳೊಳಗೆ ಶಾಂತಿಯೋ ಸಂಗ್ರಾಮವೋ—ಅದು ಕಾಲಗರ್ಭದಲ್ಲಿ ಅಡಗಿದೆ.

'ಆಸ್ಪ್ರೋ'ಮಲೇರಿಯಾವನ್ನು ನಿಲ್ಲಿಸುತ್ತದೆ

ASPRO DOES NOT HARM THE HEART OR STOMACH

'ಆಸ್ಪ್ರೋ'- ನೋವು ಮತ್ತು ಜ್ವರವನ್ನು ನಿಲ್ಲಿಸುವ ಸೇವೆ ಭಾರತಕ್ಕೆ ಕೊಡುತ್ತಿದೆ

ನೀವು ಆಣೆ ೧ಕ್ಕೆ ಗುಣಹೊಂದಬಹುದು.

INDIA ANNA 1940

BOMBAY MADRAS

MADE IN ENGLAND

ASPRO REG TRADE MARK 107A

'ಆಸ್ಪ್ರೋ' ಏನು ಮಾಡುತ್ತದೆ

- ತಲೆನೋವನ್ನು ೫ ನಿಮಿಷಗಳಲ್ಲಿ ನಿಲ್ಲಿಸುತ್ತದೆ.
- ಸಂಧಿವಾತವನ್ನು ಒಂದು ರಾತ್ರಿಯಲ್ಲಿ ಬಿಡುಗಡೆ ಮಾಡುತ್ತೆ.
- ಜ್ವರವನ್ನು ಕೆಲವು ಗಳಿಗೆಗಳಲ್ಲಿ ತಗ್ಗಿಸುತ್ತೆ.
- ಹಲ್ಲುನೋವು ಮತ್ತು ಹರಿವಾತವನ್ನು ತಕ್ಷಣ ನಿಲ್ಲಿಸುತ್ತೆ.
- ನೋವು ಮತ್ತು ಬಾಧೆಗಳನ್ನು ಕೂಡಲೇ ಶಮನಮಾಡುತ್ತದೆ.
- ನಿದ್ರಾರಹಿತರಿಗೆ ಸುಖನಿದ್ರೆ ಕೊಡುತ್ತೆ.
- ಮುಂಗೋಪವನ್ನು ತಗ್ಗಿಸುತ್ತದೆ.
- ಸ್ತ್ರೀಯರ ಬಾಧೆಗಳನ್ನು ಪರಿಹರಿಸುತ್ತೆ.
- ಇದನ್ನು ಮುಕ್ಕಳಿಸುವದರಿಂದ ಗಂಟಲು ನೋವು ಓಡಿಹೋಗುತ್ತೆ.
- ಶೀತ ಮತ್ತು ಇನ್‌ಫ್ಲುಯಂಜಾವನ್ನು ತಡೆಯುತ್ತೆ.
- ಡೆಂಗ್ಯೂ ಜ್ವರವನ್ನು ತೀವ್ರವಾಗಿ ನಿಲ್ಲಿಸುತ್ತೆ.
- ಸಾಂಕ್ರಾಮಿಕ ರೋಗಗಳು ಅಂಟದಂತೆ ಮಾಡುತ್ತೆ.

'ಆಸ್ಪ್ರೋ' ಮಲೇರಿಯಾ ಜ್ವರವನ್ನು ಓಡಿಸುತ್ತೆ ಮತ್ತು ನೋವು ಬಾಧೆಗಳನ್ನು ನಿಲ್ಲಿಸುತ್ತೆ.

'ಸೀಲ್ ಟೈಟ್' ನಲ್ಲಿರುವ 'ಆಸ್ಪ್ರೋ' ಅನೇಕ ವರ್ಷ ಪರ್ಯಂತ ಹೊಸತಾಗಿರುತ್ತೆ.

'ಆಸ್ಪ್ರೋ' ಹೃದಯ ಅಥವಾ ಉದರವನ್ನು ತೊಂದರೆ ಮಾಡುವುದಿಲ್ಲ

ಇದನ್ನು ಆಬಾಲವೃದ್ಧರು ಸುಖವಾಗಿ ತೆಗೆದುಕೊಳ್ಳಬಹುದು.

ಬೆಲೆ: ೩ ಮಾತ್ರೆಗಳಿಗೆ ಆಣೆ ೧.
೩೦ ಮಾತ್ರೆಗಳಿಗೆ ಆಣೆ ೧೦.

ಎಲ್ಲೆಲ್ಲೂ ಮಾರಲ್ಪಡುತ್ತೆ.

ಒಂದು ಮಗು ಕೂಡ 'ಆಸ್ಪ್ರೋ' ವನ್ನು ಕೆಡುಕಿಲ್ಲದೆ ಸೇವಿಸಬಹುದು

ಸೂಚನೆ: 'ಸೀಲ್ ಟೈಟ್'ನಲ್ಲಿ ಪ್ಯಾಕ್ ಆಗಿರುವ 'ಆಸ್ಪ್ರೋ' ಮಾತ್ರೆಗಳನ್ನು ನೀರಿನಲ್ಲಿ ಮುಳುಗಿಸಿದ್ದರೂ ಅವು ಒಣಗಿರುತ್ತೆ

ಪಂಚುವವರು: ಜೆ. ಎಲ್. ಮಾರಿಸನ್ ಸನ್ ಅಂಡ್ ಜೋನ್ಸ್ (ಇಂಡಿಯಾ) ಲಿ; ಪಿ. ಓ. ಬಾಕ್ಸ್ ೧೩೭೦, ಮದ್ರಾಸು (ಫೋನ್ ೪೧೨೬) ಮತ್ತು ಶಾಖೆಗಳು

ಹೆಚ್ಚು ಬೆಲೆಯ ಕಳವಿನ ಪದಾರ್ಥ

ನಾಜಿಗಳ ಅಧೀನಕ್ಕೆ ಬಂದಿರುವ ಎಲ್ಲಾ ರಾಷ್ಟ್ರಗಳಲ್ಲೂ ಇದೊಂದು ಹೊಸ ಅವಸ್ಥೆಗೆ ಆರಂಭವಾಗಿದೆ. ಯುದ್ಧದ ಸಮಯದಲ್ಲಿ, 'ರ್‍ಯಾಶನಿಂಗ್' ಪದ್ಧತಿ ರಾಷ್ಟ್ರಗಳೆಲ್ಲೆಲ್ಲಾ ಇದ್ದಿರುತ್ತಾ, ಐಶ್ವರ್ಯವಂತರು, ಹೆಚ್ಚಿನ ಪದಾರ್ಥಗಳನ್ನೊದಗಿಸಿಕೊಳ್ಳುವುದೂ ಸಹಜವಾದುದೇ. ಇಂತಹ ಸಾಮಾನುಗಳಿಗೆ,—ಆಹಾರ ಪದಾರ್ಥಗಳಿಗೆ ಹೆಚ್ಚು—ಅತಿ ಹೆಚ್ಚು ಬೆಲೆಯನ್ನಂತೂ ಕೊಟ್ಟೇ ತೀರಬೇಕಾಗಿದೆ.

ಯುದ್ಧಾರಂಭದಲ್ಲೇ, ಜಳಿಗಾಲದ ಸಮಯದಲ್ಲೇ, ಈ ಕಳವಿನ ಮಾಲುಗಳ ವ್ಯಾಪಾರ ಭರದಿಂದ ಸಾಗುತ್ತಿತ್ತು.

ಅಧಿಕ ಸಂಖ್ಯೆಯಲ್ಲಿ ಜನರು ವಾಸ ಮಾಡುವ ಬೆಲ್ಜಿಯಮಿನಲ್ಲಂತೂ, ಈ ಗೊಂದಲ ಹೇಳತೀರದು. ಆಸ್ಟ್ರಿಯದ ಮುಖ್ಯ ಪಟ್ಟಣವಾದ ವಿಯೆನ್ನಾದಲ್ಲೂ, ಜನಸಂಖ್ಯೆ ಅತಿ ದಟ್ಟವಾಗಿರುತ್ತ, ಜನರು ಇಂತಹ ರಾತ್ರೆಯ ಮಾರ್ಕೆಟುಗಳಿಂದ ಆಹಾರಪದಾರ್ಥಗಳನ್ನೊಯ್ಯುತ್ತಿದ್ದಾರೆ.

ಒಂದು ರಾತಲು ಚಾಕ್ಕೆ ೩೦ ಶಿಲಿಂಗು!

ಬೆಲ್ಜಿಯಮ್ಮಿನಲ್ಲಿ ಮಾರಾಟಕ್ಕೆ ದೊರಕದಿರುವ ಕಾಫಿ ಬೀಜಗಳನ್ನು, ರಾತಲಿಗೆ ಹತ್ತು—ಹದಿನೈದು ಶಿಲಿಂಗುಗಳೊಳಗೆ ಇಂತಹ ಮಾರ್ಕೆಟುಗಳಿಂದ ಒದಗಿಸಿಕೊಳ್ಳಬಹುದು! ಎಷ್ಟೋ ಮಂದಿ ಜರ್ಮನರು ಒಂದು ಕಿಲೋ (ಅವರ ಒಂದು ಅಳತೆ)ಗೆ ಇಪ್ಪತ್ತು ಫ್ರಾಂಕುಗಳಂತೆ ಚಾ ಕೊಂಡುಕೊಂಡು ದಾಸ್ತಾನು ಮಾಡಿ, ಈಗ ಅದನ್ನೇ ಕಿಲೋಗೆ ೪೦೦ ಫ್ರಾಂಕುಗಳಂತೆ ಮಾರುತ್ತಾರೆ! ಒಂದು ರಾತಲಿಗೆ ೩೦ ಶಿಲಿಂಗುಗಳಷ್ಟಾಯಿತು.

ಶೋಧನೆಯ ನೆಪದಿಂದ ಜರ್ಮನ್ ಪೋಲೀಸರು, ಎಷ್ಟೋ ಮಂದಿಯ ಕಾಫಿ—ಚಾಗಳ ದಾಸ್ತಾನುಗಳನ್ನುಹೊರಗೆಳೆದು, ಬಳಿಕ ತಮ್ಮ ಕಳವಿನ ಮಾರ್ಕೆಟಿನಲ್ಲಿ ಹೆಚ್ಚಿನ ಬೆಲೆಗೆ ಮಾರುವುದೂ ಇದೆ! ಇಂತಹ ಅಪರಾಧಗಳಿಗೆ, ಜರ್ಮನಿಯಲ್ಲಿ ಭಯಂಕರ ದಂಡನೆಯಿದೆಯಾದರೂ, ಈ ವ್ಯಾಪಾರವನ್ನು ನಿಲ್ಲಿಸಲು ಸಾಧ್ಯವಾಗಿಲ್ಲ. ಜೆಕೊಸ್ಲೊವೇಕಿಯದಲ್ಲಿ ಬರೇ ೬ ತಿಂಗಳುಗಳಲ್ಲಿ, ೮,೦೦೦ ಮಂದಿಯ ಮೇಲೆ ಇಂತಹ ವ್ಯಾಪಾರದ ಆರೋಪ ಹೊರಿಸಲಾಗಿತ್ತು. ೪,೦೦೦ ಮಂದಿ ಶಿಕ್ಷಿಸಲ್ಪಟ್ಟಿದ್ದರು ಆದರೂ ಈ ವ್ಯಾಪಾರ ಇನ್ನೂ ಹೊಸ ಹೊಸ ವಿಧಾನಗಳಲ್ಲಿ ನಡೆಯುತ್ತಲೇ ಇದೆ.

ಇಂತಹ ದಂಡನೆಗಳಲ್ಲೂ ಭೇದವಿದೆ. ಆತ ಪೋಲ್ ಜಾತಿಯವನಾಗಿದ್ದರೆ, ಮರಣದಂಡನೆಯಾಗಲೀ, ಹತ್ತಕ್ಕಿಂತ ಹೆಚ್ಚು ವರ್ಷಗಳ ಶಿಕ್ಷೆಯಾಗಲೀ ದೊರಕುತ್ತದೆ. ಆಸ್ಟ್ರಿಯದಲ್ಲಿ ೮ ತಿಂಗಳುಗಳಿಂದ ೩೫ ವರ್ಷಗಳವರೆಗೆ ಶಿಕ್ಷೆ ಇದೆ. ವಸೂಲಾಗುವಂತಿದ್ದರೆ, ಜುಲ್ಮಾನೆಯನ್ನೂ ಕೊಡುತ್ತಾರೆ.

ಬರ್ಲಿನಿನಲ್ಲಿ ಅಪ್ಪಣೆಯಿಲ್ಲದೆ ಒಂದು ಜತೆ ಬೂಟ್ಸು ತೆಗೆದುಕೊಂಡುದಕ್ಕೆ ಒಬ್ಬನಿಗೆ ೮ ವರುಷಗಳ ಸಶ್ರಮ ಸಜೆ ದೊರಕಿತು. ಮೊಟ್ಟೆಗಳ ಮೂಲಕ, ಬೂಟ್ಸಿನ ಕ್ರಯ ಸಲಾಯಿಸುತ್ತಿದ್ದುದು, ಅವನ ಅಪರಾಧವನ್ನು ಹೆಚ್ಚಿಸಿತು.

ಅವರ ಗೋಳು

ರ್‍ಯಾಶನಿಂಗ್ ಪದ್ಧತಿಯಾದರೂ, ಹೆಚ್ಚು ಫಲಕಾರಿಯಾಗಿಲ್ಲ. ೫,೦೦೦,೦೦೦ ಫೋರ್ಜರಿ ಕೂಪನ್‌ಗಳು, ಪ್ಯಾರಿಸ್ಸಿನಲ್ಲಿದ್ದುವಂತೆ. ಮೂರು ಮುದ್ರಾಲಯಗಳು, ಈ ಕೂಪನ್‌ಗಳ ತಯಾರಿ ಮಾಡುತ್ತಿದ್ದುವಂತೆ. ಕೂಪನ್‌ಗಳನ್ನು ಕಡಿಮೆ ಬೆಲೆಗೆ ಕೊಳ್ಳಲಾಗುತ್ತಿದೆ!

ಯಾರಾದರೂ ಸತ್ತರೆಂದರೆ ಸರಿ; ಯಾವನೊಬ್ಬ ಅಧಿಕಾರಿಗಳ ವೇಷದಲ್ಲಿ ಬಂದು ಬಿಟ್ಟು, ಆತನ ರ್‍ಯಾಶನಿಂಗ್ ಕೂಪನ್ ಕಿತ್ತುಕೊಂಡು ಓಡಿಬಿಡುತ್ತಾನೆ!

ಇಂತಹ ಸಂದರ್ಭಗಳಲ್ಲಿ ಸಿಕ್ಕಿಬಿದ್ದವೆಂದರೆ,—ಅವನ ಗೋಳು ಹೇಳತೀರದು.

ಫ್ರಾನ್ಸಿನಲ್ಲಿ ಇಂತಹ ಕಳ್ಳತನದ ಮಾರ್ಕೆಟುಗಳಲ್ಲಿ, ಹಾಲು, ಬೆಣ್ಣೆ, ಮೊಟ್ಟೆ, ಬಟಾಟೆ ಮತ್ತು ಕಾಫಿಗಳ ಬೆಲೆ ಒಂದಕ್ಕೆ ಮೂರರಷ್ಟಿದೆ. ರಖಂ—ಚಿಲ್ಲರೆಗಳೂ ಇಲ್ಲಿ ಮಾರಲ್ಪಡುತ್ತಿವೆ!

ಎಲ್ಲೆಲ್ಲೂ ಈ ಕ್ರಮಗಳಿದ್ದೇ ಇವೆ, ಹಿಟ್ಲರನ ವಿರೋಧ

ಜೆಕೊಸ್ಲೊವೇಕಿಯದಲ್ಲಿ, ಜರ್ಮನಿಯಲ್ಲಿ ಸಂಗ್ರಹವಾಗುವುದಕ್ಕಿಂತ ಹೆಚ್ಚಾಗಿ ಹಾಲು ಜಮೆಯಾಗುತ್ತಿದೆ. ಆದರೆ ಜೆಕ್ಕರೂ ಸ್ಲೋವೇಕಿಯನ್ನರೂ ಜರ್ಮನರಿಗೆ ಹಾಲನ್ನೀಯುವುದರ ಬದಲು, ಚರಂಡಿಗಳಿಗೆ ಹೊಯ್ದುಬಿಡುವರು.

ಪೋಲರಾದರೂ, ಹೀಗೆಯೆ ಆ ಹಿಟ್ಲರ್ ವಿರೋಧಿಗಳಾಗಿರುವರು.

ಸರ್ವಸಾಮಾನ್ಯವಾಗಿ ಕಳವಿನ ಮಾಲಿಗೆ ಕ್ರಯ ಕಡಿಮೆಯಾಗಿರುತ್ತದೆ. ಆದರೆ ಈ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದು ಹೆಚ್ಚು; ಬಹು ಹೆಚ್ಚು.

ಶ್ರೀ। ವೀರಸ್ವಾಮಿಯವರ ಸತ್ಯಾಗ್ರಹ ಹಾಗೂ ಶಿಕ್ಷೆ

ಬಳ್ಳಾರಿಯ ಶ್ರೀ। ವೀರಸ್ವಾಮಿ ಬಿ. ಎ., ಬಿ. ಎಲ್., ಅಡ್ವೋಕೇಟ ಇವರು, ಕಳೆದ ತಾ. ೩೦ರಲ್ಲಿ ಧಾರವಾಡದ ಗಾಂಧಿ ಚೌಕಿನಲ್ಲಿ, ಯುದ್ಧವಿರೋಧ ಘೋಷಣೆ ಮಾಡಿ ಸತ್ಯಾಗ್ರಹ ಮಾಡಿದರು. ಕೂಡಲೇ ಪೋಲೀಸರು ಅವರನ್ನು ಕೈದು ಮಾಡಿದರು- ನಂತರ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಅವರ ಖಟ್ಲೆಯ ವಿಚಾರಣೆಯಾಗಿ ೬ ತಿಂಗಳ ಕಠಿನ ಶಿಕ್ಷೆ ವಿಧಿಸಲಾಯಿತು. ಸತ್ಯಾಗ್ರಹದ ಸಮಯಕ್ಕೆ ಸುಮಾರು ಮುನ್ನೂರು ಜನರಿದ್ದರು. ಧಾರವಾಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಡಾ। ಕಬ್ಬುರ ಮತ್ತು ಶ್ರೀ। ಬಿಂದುಮಾಧವ ಬುರ್ಲಿ ಇವರ ಭಾಷಣಗಳಾದುವು.

PETROL RATIONING

You are not getting all the petrol you want because it is required elsewhere to help win the War. You can help still further by contributing the money You save thereby to the

Governor's War Fund.

ಮಕ್ಕಳಲ್ಲಿ ಕಲಿಜ ಮತ್ತು ಗುಲ್ಮದೋಷಗಳು.

ಜಮ್ಮಿಯವರ 'ಲಿವರ್‌ಕ್ಯೂರ್' ನಿಂದ ಕೂಡಲೇ ಗುಣಮಾಡ ತಕ್ಕವುಗಳು:

ಇವುಗಳಲ್ಲಿ ಜ್ವರ, ದೃಷ್ಟಿಮಾಂದ್ಯ, ಹಸಿವೆ ಇಲ್ಲದಿರುವಿಕೆ, ಅಜೀರ್ಣ, ಮಲಬದ್ಧತೆ, ಹೊಟ್ಟೆ ಉಬ್ಬುವಿಕೆ, ಸಿಡುಕು, ಆರಸಿನ ಮಂಡಿಗೆ, ಇತ್ಯಾದಿ ರೋಗ ಲಕ್ಷಣಗಳು.

ಜಮ್ಮಿಯವರ ಲಿವರ್‌ಕ್ಯೂರ

ಕಳೆದ 35 ವರ್ಷಗಳಿಂದ ಸಾವಿರಾರು ಮಕ್ಕಳ ಜೀವವನ್ನುಳಿಸಿದ ಜಮ್ಮಿಯವರ "ಲಿವರ್‌ಕ್ಯೂರ್" ಅತ್ಯುತ್ಕೃಷ್ಟವಾದ ವೈದ್ಯಕೀಯ ಕೌಶಲ್ಯವೆಂದು ಪರಿಗಣಿಸಲ್ಪಟ್ಟಿರುವುದು.

ಬೇಕಾದವರಿಗೆ ಈ ವಿಷಯದ ಪೂರ್ಣ ವಿವರಗಳನ್ನು ರವಾನಿಸುವ ವ್ಯವಸ್ಥೆ ಮಾಡಲಾಗುವುದು.

ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್,
ಸಲಾಯಿ ಸ್ಟ್ರೀಟ್,
ಮೈಲಾಪುರ, ಮದ್ರಾಸು.
ಅಲ್ಲದೆ, ಮುಂಬಯಿ, ಕಲ್ಕತ್ತಾ ಮತ್ತು ಲಕ್ನೋದಲ್ಲಿಯೂ ಇವೆ.

ಲೆನೆನ್‌ಗ್ರಾಡಿನ ಕಡೆಗೆ ನಾಜಿ ಮುನ್ನಡೆ

ಲೆನೆನ್‌ಗ್ರಾಡಿನಿಂದ ೧೫ ಮೈಲುಗಳ ದೂರದಲ್ಲಿ ಜರ್ಮನರು ಬಂದಿಳಿದಿದ್ದಾರೆಂಬುದಕ್ಕೆ ಯಾವ ಆಧಾರವೂ ಇಲ್ಲವೆಂದು ರೋಮ್ ವಾರ್ತೆ. ಅದರ ಬದಲಾಗಿ ರಷ್ಯನ್ ಸೇನೆಗಳು ಹತ್ತು ದಿನಗಳ ಘೋರ ಕಾದಾಟದಲ್ಲಿ ಜರ್ಮನ್ ಸೇನೆಗಳನ್ನು ೩೦ ಮೈಲುಗಳಷ್ಟು ದೂರ ಹಿಂದೆ ಸರಿಸಿವೆ ಎಂದೂ, ೨೨ ಹಳ್ಳಿಗಳನ್ನು ರಷ್ಯದವರು ತಿರುಗಿ ತಮ್ಮ ವಶ ಮಾಡಿಕೊಂಡರೆಂದೂ ತಿಳಿದುಬಂದಿದೆ.